Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

(EXTRAORDINARY)
(ವಿಶೇಷ ಸಂಚಿಕೆ)

| | |
|---|---|
| भाग IX | अनुभाग 1 |
| PART IX | SECTION 1 |
| ಭಾಗ IX | ವಿಭಾಗ 1 |

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ.


| | | |
|---|---|---|
| सं–1 नई दिल्ली सोमवार, जनवरी 20, 1992 | पुष्य 30, 1913 (शक) | खन्ड–13 |
| ಸಂಖ್ಯೆ ೧ ನವದೆಹಲಿ ಸೋಮವಾರ, ಜನವರಿ ೨೦, ೧೯೯೨ | ಪುಷ್ಯ ೩೦, ೧೯೧೩ (ಶಕ) | ಸಂಪುಟ ೧೩ |
| No. 1 New Delhi Monday, January 20, 1992 | Pushya 30, 1913 (Saka) | Vol. 13 |


## Ministry of Law, Justice & Company Affairs

(Legislative Department)

New Delhi, August 26, 1991.

The translations in Kannada of the following Acts, namely– (1) The Coinage Act, 1906 (2) The Water (Prevention and control of pollution) Act, 1974 (3) The Civil Defence Act, 1968 (4) The Citizenship Act, 1955 (5) The Trade Unions Act, 1926 (6) The Suits Valuation Act, 1887 (7) The Standards of Weights and Measures (Enforcement) Act, 1985 (8) The Reformatry Schools Act, 1897 (9) The Births, Deaths and Marriages Registration Act, 1886 are hereby published under the authority of the President and shall be deemed to be Authoritative Texts thereof in Kannada under Clause (a) of Section 2 of the Authoritative Texts (Central Laws) Act, 1973 (50 of 1973)

ಕೆಳಕಂಡ ಅಧಿನಿಯಮಗಳು ಎಂದರೆ— (೧) ನಾಣ್ಯ ತಯಾರಿಕೆ ಅಧಿನಿಯಮ, ೧೯೦೬ (2) ಜಲ (ಮಾಲಿನ್ಯ [illegible] ಮತ್ತು ನಿಯಂತ್ರಣ) ಅಧಿನಿಯಮ, ೧೯೭೪ (೩) ನಾಗರಿಕ ರಕ್ಷಣಾ ಅಧಿನಿಯಮ, ೧೯೬೮ (೪) ನಾಗರಿಕತ್ವ [illegible], ೧೯೫೫ (೫) ವೃತ್ತಿ ಸಂಘ ಅಧಿನಿಯಮ, ೧೯೨೬ (೬) ದಾವೆ ಮೌಲ್ಯ ನಿಗದಿ ಅಧಿನಿಯಮ, ೧೮೮೭ (೭) [illegible] ಅಳತೆ ಮಾನಕಗಳ (ಜಾರಿ) ಅಧಿನಿಯಮ, ೧೯೮೫ (೮) ಸುಧಾರಣಾ ಶಾಲೆಗಳ ಅಧಿನಿಯಮ, ೧೮೯೭ (೯) [illegible] ಮತ್ತು ವಿವಾಹ ನೋಂದಣಿ ಅಧಿನಿಯಮ, ೧೮೮೬ ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ [illegible] ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, ೧೯೭೩ [illegible] ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು [illegible].

Ministry of Law, Justice & Company Affairs

(Legislative Department)

New Delhi, November 26, 1991.

The Translations in Kannada of the following namely-(1) The Indian Red cross Society Act, 1920 (2) The Medical Termination of Pregnancy Act, 1971 (3) Police Act, 1888 (4) The Carriers Act, 1865 (5) The Interest Act, 1978 (6) The Usurious Loans Act, 1918 (7) The Wild Birds and Animals Protection Act, 1912 (8) The Indecent Representation of Women (Prohibition) Act, 1986 (9) The Unlawful Activities (Prevention) Act, 1967 (10) The Judicial Officers Protection Act, 1850 (11) The Orphanages and other Charitable Homes (Supervision and Control) Act, 1960 (12) The Insecticides Act, 1968 (13) The Indian Post Office Act, 1898 (14) The Departmental Inquiries (Enforcement of Attendance of Witnesses and Production of Documents) Act, 1972 (15) The Air (Prevention and Control of Pollution) Act, 1981 (16) The Family Courts Act, 1984 (17) The Authoritative Texts (Central Laws) Act, 1973 (18) The Prize Chits and Money Circulation Schemes (Banning) Act, 1978 (19) The Life Insurance (Emergency Provisions) Act, 1956 (20) The Poisons Act, 1919 (21) The Oaths Act, 1969 (22) The Indian Majority Act, 1875 are hereby published under the authority of the President and shall be deemed to be Authoritative Texts thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ – (1) ಭಾರತೀಯ ರೆಡ್‌ಕ್ರಾಸ್ ಸೊಸೈಟಿ ಅಧಿನಿಯಮ, 1920 (2) ವೈದ್ಯಕೀಯ ಗರ್ಭಸಮಾಪನ ಅಧಿನಿಯಮ, 1971 (3) ಪೊಲೀಸು ಅಧಿನಿಯಮ, 1888 (4) ವಾಹಕ ಅಧಿನಿಯಮ, 1865 (5) ಬಡ್ಡಿ ಅಧಿನಿಯಮ, 1978 (6) [illegible] ಸಾಲಗಳ ಅಧಿನಿಯಮ, 1918 (7) ವನ್ಯ ಪಕ್ಷಿ ಮತ್ತು ಪ್ರಾಣಿ ಸಂರಕ್ಷಣಾ ಅಧಿನಿಯಮ, 1912 (8) [illegible] ಪ್ರದರ್ಶನ (ನಿಷೇಧ) ಅಧಿನಿಯಮ, 1986 (9) ಕಾನೂನು ಬಾಹಿರ ಚಟುವಟಿಕೆ (ಪ್ರತಿಬಂಧ) ಅಧಿನಿಯಮ, 1967 (10) ನ್ಯಾಯಿಕ ಅಧಿಕಾರಿಗಳ ಸಂರಕ್ಷಣೆ ಅಧಿನಿಯಮ, 1850 (11) ಅನಾಥಾಲಯ ಮತ್ತು ಇತರ ಧರ್ಮಾರ್ಥ ಗೃಹ (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1960 (12) ಕೀಟನಾಶಕ ಅಧಿನಿಯಮ, 1968 (13) ಭಾರತ [illegible] ಅಧಿನಿಯಮ, 1988 (14) ಇಲಾಖಾ ವಿಚಾರಣೆ (ಸಾಕ್ಷಿಗಳ ಹಾಜರಾತಿ ಮತ್ತು ದಸ್ತಾವೇಜುಗಳ [illegible] ಒತ್ತಾಯಪಡಿಸುವ) ಅಧಿನಿಯಮ, 1972 (15) ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1981 (16) ಕುಟುಂಬ ನ್ಯಾಯಾಲಯ ಅಧಿನಿಯಮ, 1984 (17) ಅಧಿಕೃತ ಪಾಠ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (18) ಬಹುಮಾನ ಚೀಟಿ ಮತ್ತು ಹಣ ಪರಿಚಲನ ಯೋಜನೆ (ಬಹಿಷ್ಕರಣೆ) ಅಧಿನಿಯಮ, 1978 (19) ಜೀವವಿಮಾ ತುರ್ತು (ಉಪಬಂಧ) ಅಧಿನಿಯಮ, 1956 (20) ವಿಷ ಅಧಿನಿಯಮ, 1919 (21) ಪ್ರಮಾಣವಚನಗಳ ಅಧಿನಿಯಮ, 1969 (22) ಭಾರತ ಪ್ರಾಪ್ತವಯಸ್ಕತಾ ಅಧಿನಿಯಮ, 1875 ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50) ರ 2ನೇ ಪ್ರಕರಣದ (a) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

Ministry of Law, Justice & Company Affairs

(Legislative Department)

New Delhi, December 16, 1991.

The Traslations in Kannada of the following Acts namely (1) The Copy Right Act, 1957 (2) The Child Marriage Restraint Act, 1929 (3) The Revenue Recovery Act, 1890 (4) The Inter State Water Disputes Act, 1956 (5) The Hindu Minority and Guardianship Act, 1956 are published under the authority of the President and shall be deemed to be Authoritative Texts thereof in Kannada under clause (a) of Section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ—(1) ಕೃತಿಸ್ವಾಮ್ಯ ಅಧಿನಿಯಮ, 1957 (2) ಬಾಲ್ಯವಿವಾಹ ಪ್ರತಿಬಂಧಕ ಅಧಿನಿಯಮ, 1929 (3) ಕಂದಾಯ ವಸೂಲಿ ಅಧಿನಿಯಮ, 1890 (4) [illegible] ಅಧಿನಿಯಮ, 1956 (5) ಹಿಂದೂ ಅಪ್ರಾಪ್ತವಯಸ್ಕತೆ ಮತ್ತು [illegible] 1950 ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ [illegible] ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ [illegible] ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸ[illegible]

# ವೃತ್ತಿ ಸಂಘಗಳ ಅಧಿನಿಯಮ, 1926

## (1926ರ ಸಂಖ್ಯೆ 16)

[25ನೇ ಮಾರ್ಚ್, 1926.]

ವೃತ್ತಿ ಸಂಘಗಳ ನೋಂದಣಿಗಾಗಿ ಉಪಬಂಧಿಸುವ ಮತ್ತು ಕೆಲವು ಸಂದರ್ಭಗಳಲ್ಲಿ ನೋಂದಾಯಿತ ವೃತ್ತಿ ಸಂಘಗಳಿಗೆ ಸಂಬಂಧಪಟ್ಟ ಕಾನೂನನ್ನು ಪರಿಭಾಷಿಸುವ ಅಧಿನಿಯಮ.

ವೃತ್ತಿ ಸಂಘಗಳ ನೋಂದಣಿಗಾಗಿ ಉಪಬಂಧಿಸುವುದು ಮತ್ತು ಕೆಲವು ಸಂದರ್ಭಗಳಲ್ಲಿ ನೋಂದಾಯಿತ ವೃತ್ತಿ ಸಂಘಗಳಿಗೆ ಸಂಬಂಧಪಟ್ಟ ಕಾನೂನನ್ನು ಪರಿಭಾಷಿಸುವುದು ವಿಹಿತವಾಗಿರುವುದರಿಂದ, ಅದನ್ನು ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ:–

## ಅಧ್ಯಾಯ I

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ವೃತ್ತಿ ಸಂಘಗಳ ಅಧಿನಿಯಮ, 1926 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, "ಸಮುಚಿತ ಸರ್ಕಾರ" ಎಂದರೆ, ಯಾವ ವೃತ್ತಿ ಸಂಘಗಳ ಉದ್ದೇಶಗಳು ಒಂದು ರಾಜ್ಯಕ್ಕೆ ಸೀಮಿತವಾಗಿಲ್ಲವೋ ಆ ವೃತ್ತಿ ಸಂಘಗಳಿಗೆ ಸಂಬಂಧಪಟ್ಟಂತೆ, ಕೇಂದ್ರ ಸರ್ಕಾರ ಮತ್ತು ಇತರ ವೃತ್ತಿ ಸಂಘಗಳಿಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರ ಮತ್ತು ವಿಷಯ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಯಾವುದಾದರೂ ಇದ್ದ ಹೊರತು,–

(ಎ) "ಕಾರ್ಯ ನಿರ್ವಾಹಕ" ಎಂದರೆ, ಯಾವುದೇ ಹೆಸರಿನಿಂದ ಕರೆಯಲಿ, ವೃತ್ತಿ ಸಂಘದ ವ್ಯವಹಾರಗಳ ವ್ಯವಸ್ಥಾಪನೆಯನ್ನು ವಹಿಸಲಾಗಿರುವ ನಿಕಾಯ;

(ಬಿ) ವೃತ್ತಿ ಸಂಘದ ಸಂದರ್ಭದಲ್ಲಿ, "ಪದಾಧಿಕಾರಿ" ಎಂಬುದು ಅದರ ಕಾರ್ಯನಿರ್ವಾಹಕದ ಯಾರೇ ಸದಸ್ಯನನ್ನು ಒಳಗೊಳ್ಳುತ್ತದೆ, ಆದರೆ ಲೆಕ್ಕ ಪರಿಶೋಧಕನನ್ನು ಒಳಗೊಳ್ಳುವುದಿಲ್ಲ;

(ಸಿ) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಮಯಗಳಿಂದ ನಿಯಮಿಸಲಾದುದು;

(ಡಿ) "ನೋಂದಾಯಿತ ಕಚೇರಿ" ಎಂದರೆ, ಈ ಅಧಿನಿಯಮದ ಮೇರೆಗೆ ವೃತ್ತಿ ಸಂಘದ ಪ್ರಧಾನ ಕಚೇರಿ ಎಂದು ನೋಂದಾಯಿತವಾದ ಅದರ ಕಚೇರಿ;

(ಇ) "ನೋಂದಾಯಿತ ವೃತ್ತಿ ಸಂಘ" ಎಂದರೆ, ಈ ಅಧಿನಿಯಮದ ಮೇರೆಗೆ ನೋಂದಾಯಿಸಲಾದ ವೃತ್ತಿ ಸಂಘ;

(ಎಫ್) "ರಿಜಿಸ್ಟ್ರಾರ್"" ಎಂದರೆ:–

(i) 3ನೇ ಪ್ರಕರಣದ ಮೇರೆಗೆ ಸಮುಚಿತ ಸರ್ಕಾರವು ನೇಮಕ ಮಾಡಿದ ವೃತ್ತಿ ಸಂಘಗಳ ರಿಜಿಸ್ಟ್ರಾರ್ ಮತ್ತು ವೃತ್ತಿ ಸಂಘಗಳ ಯಾರೇ ಹೆಚ್ಚುವರಿ ಅಥವಾ ಉಪರಿಜಿಸ್ಟ್ರಾರನ್ನು ಒಳಗೊಳ್ಳುತ್ತದೆ; ಮತ್ತು

(ii) ಯಾವುದೇ ವೃತ್ತಿ ಸಂಘಕ್ಕೆ ಸಂಬಂಧಪಟ್ಟಂತೆ, ಸಂದರ್ಭಾನುಸಾರ ವೃತ್ತಿ ಸಂಘದ ಪ್ರಧಾನ ಅಥವಾ ನೋಂದಾಯಿತ ಕಚೇರಿಯು ಇರುವ ರಾಜ್ಯಕ್ಕೆ ನೇಮಕಗೊಂಡ ರಿಜಿಸ್ಟ್ರಾರ್;

(ಜಿ) "ವೃತ್ತಿ ವಿವಾದ" ಎಂದರೆ, ಯಾರೇ ವ್ಯಕ್ತಿಯ ನಿಯೋಜನೆ ಅಥವಾ ಅನಿಯೋಜನೆ ಅಥವಾ ನಿಯೋಜನೆಯ ನಿಬಂಧನೆಗಳಿಗೆ ಅಥವಾ ದುಡಿಮೆಯ ಷರತ್ತುಗಳಿಗೆ ಸಂಬಂಧಿಸಿದ್ದು, ನಿಯೋಜಕರ ಮತ್ತು ಕೆಲಸಗಾರರ ನಡುವಣ ಅಥವಾ ಕೆಲಸಗಾರರ ಮತ್ತು ಕೆಲಸಗಾರರ ನಡುವಣ ಅಥವಾ ನಿಯೋಜಕರು ಮತ್ತು ನಿಯೋಜಕರ ನಡುವಣ ಯಾವುದೇ ವಿವಾದ ಮತ್ತು "ಕೆಲಸಗಾರರು" ಎಂದರೆ, ಯಾವ ನಿಯೋಜಕನೊಡನೆ ವೃತ್ತಿ ವಿವಾದವು ಉದ್ಭವಿಸುವುದೋ ಆ ನಿಯೋಜಕನು ನಿಯೋಜನೆಯಲ್ಲಿರಲಿ ಅಥವಾ ಇಲ್ಲದಿರಲಿ ವೃತ್ತಿ ಅಥವಾ ಕೈಗಾರಿಕೆಯಲ್ಲಿ ನಿಯೋಜಿತರಾಗಿರುವ ಎಲ್ಲಾ ವ್ಯಕ್ತಿಗಳು; ಮತ್ತು

(ಹೆಚ್) "ವೃತ್ತಿ ಸಂಘ" ಎಂದರೆ, ಮುಖ್ಯವಾಗಿ ಕೆಲಸಗಾರರು ಮತ್ತು ನಿಯೋಜಕರ ನಡುವಣ ಅಥವಾ ಕೆಲಸಗಾರರು ಮತ್ತು ಕೆಲಸಗಾರರ ನಡುವಣ ಅಥವಾ ನಿಯೋಜಕ ಮತ್ತು ನಿಯೋಜಕರ ನಡುವಣ ಸಂಬಂಧವನ್ನು ವಿನಿಯಮನಗೊಳಿಸುವ ಉದ್ದೇಶಕ್ಕಾಗಿ ಅಥವಾ ಯಾವುದೇ ವೃತ್ತಿ ಅಥವಾ ವ್ಯಾಪಾರವನ್ನು ನಿರ್ವಹಿಸುವುದರ ಮೇಲೆ ಪ್ರತಿಬಂಧಕ ಷರತ್ತುಗಳನ್ನು ವಿಧಿಸುವುದಕ್ಕಾಗಿ ತಾತ್ಕಾಲಿಕವಾಗಿಯಾಗಲಿ ಅಥವಾ ಖಾಯಂ ಆಗಿಯಾಗಲಿ ರಚಿಸಲಾದ

ಯಾವುದೇ ಸಂಯೋಜನೆ ಮತ್ತು ಅದು ಎರಡು ಅಥವಾ ಹೆಚ್ಚು ವೃತ್ತಿ ಸಂಘಗಳ ಯಾವುದೇ ಸಂಯುಕ್ತ ಸಂಘವನ್ನು ಒಳಗೊಳ್ಳುತ್ತದೆ:

ಪರಂತು ಈ ಅಧಿನಿಯಮವು,–

(i) ಪಾಲುಗಾರರ ನಡುವೆ ಅವರ ಸ್ವಂತ ವ್ಯಾಪಾರದ ಬಗೆಗಿನ ಯಾವುದೇ ಒಪ್ಪಂದ;

(ii) ನಿಯೋಜಕನ ಮತ್ತು ಅಂಥ ನಿಯೋಜನೆಗಾಗಿ ಅವನು ನಿಯೋಜಿಸಿಕೊಂಡಿರುವವರ ನಡುವಣ ಯಾವುದೇ ಒಪ್ಪಂದ; ಅಥವಾ

(iii) ವ್ಯಾಪಾರದ ಸುನಾಮೆಯ ಮಾರಾಟದ ಅಥವಾ ಯಾವುದೇ ವೃತ್ತಿ, ವ್ಯಾಪಾರ ಅಥವಾ ಕರಕುಶಲತೆಯಲ್ಲಿ ಪ್ರತಿಫಲಕ್ಕಾಗಿ ಯಾವುದೇ ಒಪ್ಪಂದ

- ಇವುಗಳಿಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

## ಅಧ್ಯಾಯ II

## ವೃತ್ತಿ ಸಂಘಗಳ ನೋಂದಣಿ

**3. ರಿಜಿಸ್ಟ್ರಾರುಗಳ ನೇಮಕಾತಿ.–** (1) ಸಮುಚಿತ ಸರ್ಕಾರವು, ಪ್ರತಿಯೊಂದು ರಾಜ್ಯಕ್ಕೆ ವೃತ್ತಿ ಸಂಘಗಳ ರಿಜಿಸ್ಟ್ರಾರ್ ಆಗಿ ಒಬ್ಬ ವ್ಯಕ್ತಿಯನ್ನು ನೇಮಕ ಮಾಡತಕ್ಕದ್ದು.

(2) ಸಮುಚಿತ ಸರ್ಕಾರವು, ಅದು ಆದೇಶದ ಮೂಲಕ, ಈ ಅಧಿನಿಯಮದ ಮೇರೆಗಿನ ರಿಜಿಸ್ಟ್ರಾರನು ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ರಿಜಿಸ್ಟ್ರಾರನ ಅಧೀಕ್ಷಣೆ ಮತ್ತು ನಿರ್ದೇಶನದ ಮೇರೆಗೆ ಚಲಾಯಿಸುವ ಮತ್ತು ನಿರ್ವಹಿಸುವ ಉದ್ದೇಶಕ್ಕಾಗಿ ತಾನು ಸೂಕ್ತವೆಂದು ಭಾವಿಸಬಹುದಾದ ಸಂಖ್ಯೆಯ ವೃತ್ತಿ ಸಂಘಗಳ ಹೆಚ್ಚುವರಿ ಮತ್ತು ಉಪರಿಜಿಸ್ಟ್ರಾರರನ್ನು ನೇಮಕ ಮಾಡಬಹುದು ಮತ್ತು ಯಾವ ಸ್ಥಳೀಯ ಪರಿಮಿತಿಗಳೊಳಗೆ ಹಾಗೆ ನಿರ್ದಿಷ್ಟಪಡಿಸಿದ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಯಾರೇ ಅಂಥ ಹೆಚ್ಚುವರಿ ಅಥವಾ ಉಪರಿಜಿಸ್ಟ್ರಾರನು ಚಲಾಯಿಸತಕ್ಕದ್ದೋ ಮತ್ತು ನಿರ್ವಹಿಸತಕ್ಕದ್ದೋ, ಆ ಯಾವುದೇ ಸ್ಥಳೀಯ ನಿರ್ಧರಿಸಬಹುದು.

(3) ಉಪಪ್ರಕರಣ (2)ರ ಮೇರೆಗಿನ ಯಾವುದೇ ಆದೇಶದ ಉಪಬಂಧಗಳಿಗೊಳಪಟ್ಟು ಹೆಚ್ಚುವರಿ ಅಥವಾ ಉಪರಿಜಿಸ್ಟ್ರಾರನು ವೃತ್ತಿ ಸಂಘದ ನೋಂದಾಯಿತ ಕಚೇರಿಯು ಇರುವ ಪ್ರದೇಶದಲ್ಲಿ ರಿಜಿಸ್ಟ್ರಾರನ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಚಲಾಯಿಸುವಲ್ಲಿ ಅಥವಾ ನಿರ್ವಹಿಸುವಲ್ಲಿ ಈ ಅಧಿನಿಯಮದ ಉದ್ದೇಶಗಳಿಗಾಗಿ ಹೆಚ್ಚುವರಿ ಅಥವಾ ಉಪರಿಜಿಸ್ಟ್ರಾರರನ್ನು ಆ ವೃತ್ತಿ ಸಂಘಕ್ಕೆ ಸಂಬಂಧಪಟ್ಟಂತೆ ರಿಜಿಸ್ಟ್ರಾರನೆಂದು ಭಾವಿಸತಕ್ಕದ್ದು.

**4. ನೋಂದಣಿಯ ವಿಧಾನ.–** (1) ವೃತ್ತಿ ಸಂಘದ ಯಾರೇ ಏಳು ಅಥವಾ ಹೆಚ್ಚು ಸದಸ್ಯರು ವೃತ್ತಿ ಸಂಘದ ನಿಯಮಗಳಿಗೆ ತಮ್ಮ ಹೆಸರುಗಳನ್ನು ರುಜು ಮಾಡುವ ಮೂಲಕ ಮತ್ತು ನೋಂದಣಿಗೆ ಸಂಬಂಧಿಸಿದ ಈ ಅಧಿನಿಯಮದ ಉಪಬಂಧಗಳನ್ನು ಅನ್ಯಥಾ ಪಾಲಿಸುವ ಮೂಲಕ, ಈ ಅಧಿನಿಯಮದ ಮೇರೆಗೆ ವೃತ್ತಿ ಸಂಘದ ನೋಂದಣಿಗಾಗಿ ಅರ್ಜಿ ಹಾಕಿಕೊಳ್ಳಬಹುದು:

ಪರಂತು, ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸುವ ದಿನಾಂಕದಂದು ಆ ವೃತ್ತಿ ಸಂಘವು ಯಾವ ಉದ್ಯಮ ಅಥವಾ ಕೈಗಾರಿಕೆಗೆ ಸಂಬಂಧಿಸಿದೆಯೋ ಆ ಉದ್ಯಮ ಅಥವಾ ಕೈಗಾರಿಕೆಯಲ್ಲಿ ಕೆಲಸ ಮಾಡುತ್ತಿರುವ ಅಥವಾ ನಿಯೋಜಿತಗೊಂಡಿರುವ ಕನಿಷ್ಠ ಶೇಕಡ ಹತ್ತರಷ್ಟು ಅಥವಾ ಒಂದು ನೂರು ಕೆಲಸಗಾರರು, ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಕೆಲಸಗಾರರು ಅಂಥ ವೃತ್ತಿ ಸಂಘದ ಸದಸ್ಯರಾಗಿರುವ ಹೊರತು ಆ ಕೆಲಸಗಾರರ ವೃತ್ತಿ ಸಂಘವನ್ನು ನೋಂದಾಯಿಸತಕ್ಕದ್ದಲ್ಲ:

ಮತ್ತು ಪರಂತು, ಅರ್ಜಿಯನ್ನು ಸಲ್ಲಿಸುವ ದಿನಾಂಕದಂದು ಕಾರ್ಮಿಕರ ವೃತ್ತಿ ಸಂಘವು ಯಾವ ಉದ್ಯಮ ಅಥವಾ ಕೈಗಾರಿಕೆಗೆ ಸಂಬಂಧಪಟ್ಟಿದೆಯೋ ಆ ಉದ್ಯಮ ಅಥವಾ ಕೈಗಾರಿಕೆಯಲ್ಲಿ ಕೆಲಸ ಮಾಡುತ್ತಿರುವ ಅಥವಾ ನಿಯೋಜನೆಗೊಂಡಿರುವ ಕಾರ್ಮಿಕರಾದ ಏಳಕ್ಕಿಂತ ಕಡಿಮೆ ವ್ಯಕ್ತಿಗಳು ಅದರ ಸದಸ್ಯರಾಗಿದ್ದ ಹೊರತು ಆ ಕಾರ್ಮಿಕ ವೃತ್ತಿ ಸಂಘವನ್ನು ನೋಂದಣಿ ಮಾಡತಕ್ಕದ್ದಲ್ಲ.

(2) ಉಪಪ್ರಕರಣ (1)ರ ಮೇರೆಗೆ ವೃತ್ತಿ ಸಂಘದ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸಿರುವಲ್ಲಿ, ಅಂಥ ಅರ್ಜಿಯು, ಅರ್ಜಿಯ ದಿನಾಂಕದ ತರುವಾಯ ಆದರೆ ವೃತ್ತಿ ಸಂಘದ ನೋಂದಣಿಗೆ ಮುಂಚೆ, ಯಾವುದೇ ಕಾಲದಲ್ಲಿ ಕೆಲವು ಅರ್ಜಿದಾರರು, ಆದರೆ ಅರ್ಜಿಯನ್ನು ಸಲ್ಲಿಸಿದ ವ್ಯಕ್ತಿಗಳ ಒಟ್ಟು ಸಂಖ್ಯೆಯ ಅರ್ಧವನ್ನು ಮೀರದಷ್ಟು ಅರ್ಜಿದಾರರು ಆ ವೃತ್ತಿ ಸಂಘದ ಸದಸ್ಯರಾಗಿರುವುದು ನಿಂತುಹೋಗಿರುವ ಅಥವಾ ಅರ್ಜಿಯಿಂದ ಅವರು ಹಿಂತೆಗೆದುಕೊಂಡಿರುವುದಾಗಿ ರಿಜಿಸ್ಟ್ರಾರರಿಗೆ ಬರಹದಲ್ಲಿ ನೋಟೀಸನ್ನು ಕೊಟ್ಟಿರುವ ಸಂಗತಿಯ ಕಾರಣ ಮಾತ್ರದಿಂದಲೇ ಅಸಿಂಧುವಾಗಿರುವುದಾಗಿ ಭಾವಿಸತಕ್ಕದ್ದಲ್ಲ.

**5. ನೋಂದಣಿಗಾಗಿ ಅರ್ಜಿ.–** (1) ವೃತ್ತಿ ಸಂಘದ ನೋಂದಣಿಗಾಗಿ ಪ್ರತಿಯೊಂದು ಅರ್ಜಿಯನ್ನು ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದ್ದು ಮತ್ತು ಅದಕ್ಕೆ ವೃತ್ತಿ ಸಂಘದ ನಿಯಮಗಳ ಒಂದು ಪ್ರತಿ ಮತ್ತು ಕೆಳಕಂಡ ವಿವರಗಳ ವಿವರಣೆಯು ಲಗತ್ತಾಗಿರತಕ್ಕದ್ದು, ಎಂದರೆ:–

(ಎ) ಅರ್ಜಿಯನ್ನು ಸಲ್ಲಿಸುವ ಸದಸ್ಯರ ಹೆಸರುಗಳು, ಉದ್ಯೋಗಗಳು ಮತ್ತು ವಿಳಾಸಗಳು;

(ಎಎ) ಕಾರ್ಮಿಕರ ವೃತ್ತಿ ಸಂಘದ ಸಂದರ್ಭದಲ್ಲಿ, ಅರ್ಜಿ ಸಲ್ಲಿಸುತ್ತಿರುವ ವೃತ್ತಿ ಸಂಘದ ಸದಸ್ಯರ ಹೆಸರುಗಳು, ಉದ್ಯೋಗಗಳು ಮತ್ತು ಕೆಲಸ ನಿರ್ವಹಿಸುತ್ತಿರುವ ಸ್ಥಳದ ವಿಳಾಸಗಳು;

(ಬಿ) ವೃತ್ತಿ ಸಂಘದ ಹೆಸರು ಮತ್ತು ಅದರ ಪ್ರಧಾನ ಕಚೇರಿಯ ವಿಳಾಸ; ಮತ್ತು

(ಸಿ) ವೃತ್ತಿ ಸಂಘದ ಪದಾಧಿಕಾರಿಗಳ ಪದನಾಮಗಳು, ಹೆಸರುಗಳು, ವಯಸ್ಸು, ವಿಳಾಸಗಳು ಮತ್ತು ಉದ್ಯೋಗಗಳು.

(2) ವೃತ್ತಿ ಸಂಘವು ತನ್ನ ನೋಂದಣಿಗಾಗಿ ಅರ್ಜಿ ಸಲ್ಲಿಸುವುದಕ್ಕೆ ಮುಂಚೆ, ಒಂದು ವರ್ಷಕ್ಕಿಂತ ಹೆಚ್ಚು ಕಾಲದವರೆಗೆ ಅಸ್ತಿತ್ವದಲ್ಲಿರುವಲ್ಲಿ, ಆ ಅರ್ಜಿಯೊಂದಿಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ವಿವರಗಳನ್ನೊಳಗೊಂಡು ತಯಾರಿಸಿದ, ವೃತ್ತಿ ಸಂಘದ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಸಾಮಾನ್ಯ ವಿವರಪತ್ರವನ್ನು ರಿಜಿಸ್ಟ್ರಾರನಿಗೆ ಕೊಡತಕ್ಕದ್ದು.

**6. ವೃತ್ತಿ ಸಂಘದ ನಿಯಮಗಳಲ್ಲಿ ಅಡಕವಾಗಿರಬೇಕಾದ ಉಪಬಂಧಗಳು.–** ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ವೃತ್ತಿ ಸಂಘದ ಕಾರ್ಯನಿರ್ವಾಹಕವು ರಚಿತವಾಗಿದ್ದ ಹೊರತು ಮತ್ತು ಅದರ ನಿಯಮಗಳು ಈ ಕೆಳಕಂಡ ವಿಷಯಗಳನ್ನು ಉಪಬಂಧಿಸಿದ್ದ ಹೊರತು ಈ ಅಧಿನಿಯಮದ ಮೇರೆಗೆ ವೃತ್ತಿ ಸಂಘವು ನೋಂದಣಿಗೆ ಹಕ್ಕುಳ್ಳದ್ದಾಗಿರತಕ್ಕದ್ದಲ್ಲ, ಎಂದರೆ:–

(ಎ) ವೃತ್ತಿ ಸಂಘದ ಹೆಸರು;

(ಬಿ) ಯಾವ ಉದ್ದೇಶಗಳಿಗಾಗಿ ವೃತ್ತಿ ಸಂಘವು ಸ್ಥಾಪಿತವಾಗಿದೆಯೋ ಆ ಎಲ್ಲಾ ಉದ್ದೇಶಗಳು;

(ಸಿ) ಯಾವ ಉದ್ದೇಶಗಳಿಗಾಗಿ ವೃತ್ತಿ ಸಂಘದ ಸಾಮಾನ್ಯ ನಿಧಿಗಳು ವಿನಿಯೋಗವಾಗತಕ್ಕವೋ ಆ ಎಲ್ಲಾ ಉದ್ದೇಶಗಳು, ಈ ಅಧಿನಿಯಮದ ಮೇರೆಗೆ ಅಂಥ ನಿಧಿಗಳು ಕಾನೂನುಬದ್ಧವಾಗಿ ಯಾವ ಉದ್ದೇಶಗಳಿಗೆ ವಿನಿಯೋಗವಾಗಬಹುದೋ ಆ ಎಲ್ಲಾ ಉದ್ದೇಶಗಳು;

(ಡಿ) ವೃತ್ತಿ ಸಂಘದ ಸದಸ್ಯರ ಪಟ್ಟಿಯನ್ನು ಇಟ್ಟುಕೊಂಡು ಬರುವುದು ಮತ್ತು ಅದರ ಪದಾಧಿಕಾರಿಗಳಿಂದ ಮತ್ತು ಸದಸ್ಯರಿಂದ ಅದರ ಪರಿಶೀಲನೆಗಾಗಿ ಸಾಕಷ್ಟು ಸೌಲಭ್ಯಗಳು;

(ಇ) ವೃತ್ತಿ ಸಂಘದ ಕಾರ್ಯನಿರ್ವಾಹಕದ ರಚನೆಗಾಗಿ, 22ನೇ ಪ್ರಕರಣದ ಮೇರೆಗೆ ಅಗತ್ಯಪಡಿಸಲಾದಂತೆ ಪದಾಧಿಕಾರಿಯಾಗಿರುವಷ್ಟು ಸಂಖ್ಯೆಯ ಆ ಸಂಘವು ಯಾವ ಕೈಗಾರಿಕೆಯೊಂದಿಗೆ ಸಂಬಂಧ ಹೊಂದಿದೆಯೋ ಅದರಲ್ಲಿ ವಾಸ್ತವವಾಗಿ ತೊಡಗಿರುವ ಅಥವಾ ನಿಯೋಜಿತರಾಗಿರುವ ಸಾಮಾನ್ಯ ಸದಸ್ಯರಾಗಿರುವ ವ್ಯಕ್ತಿಗಳನ್ನು ಸೇರಿಸಿಕೊಳ್ಳುವ ಮತ್ತು ಗೌರವಾನ್ವಿತ ಅಥವಾ ತಾತ್ಕಾಲಿಕ ಸದಸ್ಯರನ್ನು ಸಹ ಸೇರಿಸಿಕೊಳ್ಳುವ ವಿಚಾರ;

(ಇಇ) ವೃತ್ತಿ ಸಂಘದ ಸದಸ್ಯರು,–

(i) ಗ್ರಾಮೀಣ ಕಾರ್ಮಿಕರ ಸಂದರ್ಭದಲ್ಲಿ, ಪ್ರತಿ ವರ್ಷಕ್ಕೆ ಒಂದು ರೂಪಾಯಿಗಿಂತ;

(ii) ಇತರೆ ಅಸಂಘಟಿತ ವಲಯಗಳ ಕಾರ್ಮಿಕರ ಸಂದರ್ಭದಲ್ಲಿ, ಪ್ರತಿ ವರ್ಷಕ್ಕೆ ಮೂರು ರೂಪಾಯಿಗಳಿಗಿಂತ; ಮತ್ತು

(iii) ಇತರೆ ಯಾವುದೇ ಕಾರ್ಮಿಕರ ಸಂದರ್ಭದಲ್ಲಿ, ಪ್ರತಿ ವರ್ಷಕ್ಕೆ ಹನ್ನೆರಡು ರೂಪಾಯಿಗಳಿಗಿಂತ

– ಕಡಿಮೆಯಲ್ಲದ ಕನಿಷ್ಠ ಚಂದಾ ಹಣದ ಸಂದಾಯ;

(ಎಫ್) ಯಾವ ಷರತ್ತುಗಳ ಮೇರೆಗೆ ಯಾರೇ ಸದಸ್ಯನು ನಿಯಮಗಳ ಮೂಲಕ ಖಾತ್ರಿಗೊಳಿಸಿದ ಯಾವುದೇ ಪ್ರಯೋಜನಕ್ಕೆ ಹಕ್ಕುಳ್ಳವನಾಗಿರುವನೋ ಮತ್ತು ಯಾವುಗಳ ಮೇರೆಗೆ ಸದಸ್ಯರ ಮೇಲೆ ದಂಡ ಅಥವಾ ಮುಟ್ಟುಗೋಲನ್ನು ವಿಧಿಸಬಹುದೋ ಆ ಷರತ್ತುಗಳು;

(ಜಿ) ನಿಯಮಗಳನ್ನು ತಿದ್ದುಪಡಿ ಮಾಡತಕ್ಕ, ವ್ಯತ್ಯಾಸಗೊಳಿಸತಕ್ಕ ಅಥವಾ ರದ್ದುಗೊಳಿಸತಕ್ಕ ರೀತಿ;

(ಹೆಚ್) ವೃತ್ತಿ ಸಂಘದ ಕಾರ್ಯನಿರ್ವಾಹಕದ ಸದಸ್ಯರ ಮತ್ತು ಇತರ ಪದಾಧಿಕಾರಿಗಳನ್ನು ಚುನಾಯಿಸತಕ್ಕ ಮತ್ತು ತೆಗೆದುಹಾಕತಕ್ಕ ರೀತಿ;

(ಹೆಚ್‌ಹೆಚ್) ವೃತ್ತಿ ಸಂಘದ ಕಾರ್ಯನಿರ್ವಾಹಕ ಸದಸ್ಯರು ಮತ್ತು ಇತರೆ ಪದಾಧಿಕಾರಿಗಳು ಮೂರು ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಯಾವ ಅವಧಿಗೆ ಚುನಾಯಿತರಾಗತಕ್ಕದ್ದೋ ಆ ಪದಾವಧಿ;

(ಐ) ವೃತ್ತಿ ಸಂಘದ ನಿಧಿಗಳ ಸುರಕ್ಷಿತ ಅಭಿರಕ್ಷೆ, ನಿಯಮಿಸಬಹುದಾದಂಥ ರೀತಿಯಲ್ಲಿ ಅದರ ಲೆಕ್ಕಗಳ ವಾರ್ಷಿಕ ಲೆಕ್ಕಪರಿಶೋಧನೆ ಮತ್ತು ವೃತ್ತಿ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು ಲೆಕ್ಕದ ಪುಸ್ತಕಗಳನ್ನು ಪರಿಶೀಲಿಸುವುದಕ್ಕಾಗಿ ಸಾಕಷ್ಟು ಸೌಲಭ್ಯಗಳು; ಮತ್ತು

(ಜೆ) ವೃತ್ತಿ ಸಂಘವನ್ನು ವಿಘಟಿಸಬಹುದಾದ ರೀತಿ.

**7. ಹೆಚ್ಚಿನ ವಿವರಗಳನ್ನು ಕೇಳುವ ಮತ್ತು ಹೆಸರುಗಳನ್ನು ಬದಲಾಯಿಸುವಂತೆ ಅಗತ್ಯಪಡಿಸುವ ಅಧಿಕಾರ.–** (1) ರಿಜಿಸ್ಟ್ರಾರನು ಯಾವುದೇ ಅರ್ಜಿಯು 5ನೇ ಪ್ರಕರಣದ ಉಪಬಂಧಗಳನ್ನು ಪಾಲಿಸುತ್ತದೆಯೆಂದು ಅಥವಾ ವೃತ್ತಿ ಸಂಘವು 6ನೇ ಪ್ರಕರಣದ ಮೇರೆಗೆ ನೋಂದಣಿಗೆ ಹಕ್ಕುಳ್ಳದ್ದಾಗಿದೆಯೆಂದು ತಾನು ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ಹೆಚ್ಚಿನ ಮಾಹಿತಿಯನ್ನು ಕೇಳಬಹುದು ಮತ್ತು ಅಂಥ ಮಾಹಿತಿಯನ್ನು ಒದಗಿಸುವ ತನಕ ವೃತ್ತಿ ಸಂಘವನ್ನು ನೋಂದಾಯಿಸಲು ನಿರಾಕರಿಸಬಹುದು.

(2) ವೃತ್ತಿ ಸಂಘವನ್ನು ಯಾವ ಹೆಸರಿನ ಮೇರೆಗೆ ನೋಂದಾಯಿಸಬೇಕೆಂದು ಉದ್ದೇಶಿಸಲಾಗಿದೆಯೋ ಆ ಹೆಸರು, ನೋಂದಾಯಿತವಾಗಿ ಅಸ್ತಿತ್ವದಲ್ಲಿರುವ ಯಾವುದೇ ಇತರ ವೃತ್ತಿ ಸಂಘದ ಹೆಸರಿನಂತೆಯೇ ಇದ್ದರೆ ಅಥವಾ ಅಂಥ ಹೆಸರು ಸಾರ್ವಜನಿಕರು ಅಥವಾ ಆ ಎರಡೂ ವೃತ್ತಿ ಸಂಘಗಳ ಸದಸ್ಯರುಗಳನ್ನು ವಂಚಿಸುವ ಸಂಭವವಿರುವ ಹೆಸರನ್ನು ಹೆಚ್ಚು ಕಡಿಮೆ ಹೋಲುತ್ತದೆಂದು ರಿಜಿಸ್ಟ್ರಾರನ ಅಭಿಪ್ರಾಯಪಟ್ಟರೆ, ರಿಜಿಸ್ಟ್ರಾರನ್ನು ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸಿರುವ ವ್ಯಕ್ತಿಗಳನ್ನು ಅರ್ಜಿಯಲ್ಲಿ ಹೇಳಿರುವ ವೃತ್ತಿ ಸಂಘದ ಹೆಸರನ್ನು ಬದಲಾಯಿಸುವಂತೆ ಅಗತ್ಯಪಡಿಸತಕ್ಕದ್ದು ಮತ್ತು ಅಂಥ ಬದಲಾವಣೆಯನ್ನು ಮಾಡುವ ತನಕ ಸಂಘವನ್ನು ನೋಂದಾಯಿಸಲು ನಿರಾಕರಿಸತಕ್ಕದ್ದು.

**8. ನೋಂದಣಿ.–** ನೋಂದಣಿಯ ಸಂಬಂಧದಲ್ಲಿ ವೃತ್ತಿ ಸಂಘವು ಈ ಅಧಿನಿಯಮದ ಅಗತ್ಯತೆಗಳನ್ನು ಪಾಲಿಸಿವೆಯೆಂದು ರಿಜಿಸ್ಟ್ರಾರನು ಮನದಟ್ಟು ಮಾಡಿಕೊಂಡ ಮೇಲೆ ವೃತ್ತಿ ಸಂಘಕ್ಕೆ ಸಂಬಂಧಪಟ್ಟಂತೆ ನೋಂದಣಿಗಾಗಿ ಅರ್ಜಿಯ ಜೊತೆಗಿರುವ ವಿವರಣೆಯಲ್ಲಿ ಅಡಕವಾಗಿರುವ ವಿವರಗಳನ್ನು, ನಿಯಮಿಸಬಹುದಾದಂಥ ನಮೂನೆಯಲ್ಲಿ ಇಡಬೇಕಾದ ರಿಜಿಸ್ಟರಿನಲ್ಲಿ ನಮೂದಿಸುವ ಮೂಲಕ ವೃತ್ತಿ ಸಂಘವನ್ನು ನೋಂದಾಯಿಸತಕ್ಕದ್ದು.

**9. ನೋಂದಣಿಯ ಪ್ರಮಾಣಪತ್ರ.–** ರಿಜಿಸ್ಟ್ರಾರನು 8ನೇ ಪ್ರಕರಣದ ಮೇರೆಗೆ ವೃತ್ತಿ ಸಂಘವನ್ನು ನೋಂದಾಯಿಸಿದ ಮೇಲೆ ನಿಯಮಿಸಿದ ನಮೂನೆಯಲ್ಲಿ ನೋಂದಣಿ ಪ್ರಮಾಣಪತ್ರವನ್ನು ನೀಡತಕ್ಕದ್ದು, ಅದು ವೃತ್ತಿ ಸಂಘವು ಈ ಅಧಿನಿಯಮದ ಮೇರೆಗೆ ಕ್ರಮಬದ್ಧವಾಗಿ ನೋಂದಾಯಿತವಾಗಿದೆ ಎಂಬುದರ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.

**10. ನೋಂದಣಿಯ ರದ್ದಿಯಾತಿ.–** ರಿಜಿಸ್ಟ್ರಾರನು,–

(ಎ) ನಿಯಮಿಸಬಹುದಾದಂಥ ರೀತಿಯಲ್ಲಿ ಸತ್ಯಾರ್ಪನೆ ಮಾಡಬೇಕಾದ ವೃತ್ತಿ ಸಂಘದ ಅರ್ಜಿಯ ಮೇಲೆ;

(ಬಿ) ಪ್ರಮಾಣಪತ್ರವನ್ನು ಮೋಸ ಅಥವಾ ತಪ್ಪಿನಿಂದ ಪಡೆಯಲಾಗಿದೆಯೆಂದು ಅಥವಾ ವೃತ್ತಿ ಸಂಘವು ಅಸ್ತಿತ್ವದಲ್ಲಿರುವುದು ನಿಂತು ಹೋಗಿದೆಯೆಂದು ಅಥವಾ ಅದು ಉದ್ದೇಶಪೂರ್ವಕವಾಗಿ ಮತ್ತು ರಿಜಿಸ್ಟ್ರಾರನು ನೋಟೀಸು ನೀಡಿದ ತರುವಾಯ ಈ ಅಧಿನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸಿದೆಯೆಂದು ಅಥವಾ ಅಂಥ ಯಾವುದೇ ಉಪಬಂಧಕ್ಕೆ ಅಸಂಗತವಾಗಿರುವ ಯಾವುದೇ ನಿಯಮವು ಜಾರಿಯಲ್ಲಿರಲು ಅನುಮತಿಸಿದೆಯೆಂದು ಅಥವಾ 6ನೇ ಪ್ರಕರಣದ ಮೂಲಕ ಅಗತ್ಯಪಡಿಸಿದ ಯಾವುದೇ ವಿಷಯದ ಬಗ್ಗೆ ಉಪಬಂಧಿಸುವ ಯಾವುದೇ ನಿಯಮವನ್ನು ರದ್ದುಗೊಳಿಸಿದೆಯೆಂದು ರಿಜಿಸ್ಟ್ರಾರನಿಗೆ ಮನದಟ್ಟಾದರೆ

– ವೃತ್ತಿ ಸಂಘದ ನೋಂದಣಿಯ ಪ್ರಮಾಣಪತ್ರವನ್ನು ಹಿಂತೆಗೆದುಕೊಳ್ಳಬಹುದು ಅಥವಾ ರದ್ದುಗೊಳಿಸಬಹುದು;

(ಸಿ) ಕಾರ್ಮಿಕರ ನೋಂದಾಯಿತ ವೃತ್ತಿ ಸಂಘವು ಅಗತ್ಯವಿರುವ ಸಂಖ್ಯೆಯ ಸದಸ್ಯರನ್ನು ಹೊಂದುವುದನ್ನು ನಿಲ್ಲಿಸಿದೆ ಎಂದು ರಿಜಿಸ್ಟ್ರಾರ್‌ಗೆ ಮನವರಿಕೆಯಾದರೆ:

ಪರಂತು, ರಿಜಿಸ್ಟ್ರಾರನು ವೃತ್ತಿ ಸಂಘದ ಅರ್ಜಿಯ ಮೇಲಲ್ಲದೆ ಅನ್ಯಥಾ ಪ್ರಮಾಣಪತ್ರವನ್ನು ಹಿಂತೆಗೆದುಕೊಳ್ಳುವುದಕ್ಕೆ ಅಥವಾ ರದ್ದುಗೊಳಿಸುವುದಕ್ಕೆ ಮುಂಚೆ ಯಾವ ಕಾರಣದ ಮೇಲೆ ಪ್ರಮಾಣಪತ್ರವನ್ನು ಹಿಂತೆಗೆದುಕೊಳ್ಳಲು ಅಥವಾ ರದ್ದುಗೊಳಿಸಲು ಉದ್ದೇಶಿಸಲಾಗಿದೆ ಎಂಬುದನ್ನು ನಿರ್ದಿಷ್ಟಪಡಿಸಿ ಎರಡು ತಿಂಗಳುಗಳಿಗೆ ಕಡಿಮೆಯಿಲ್ಲದ ಪೂರ್ವಭಾವಿ ನೋಟೀಸನ್ನು ಬರಹದಲ್ಲಿ ವೃತ್ತಿ ಸಂಘಕ್ಕೆ ಕೊಡತಕ್ಕದ್ದು.

**11. ಅಪೀಲು.–** (1) ವೃತ್ತಿ ಸಂಘವನ್ನು ನೋಂದಾಯಿಸಲು ರಿಜಿಸ್ಟ್ರಾರನ ಯಾವುದೇ ನಿರಾಕರಣೆಯಿಂದ ಅಥವಾ ನೋಂದಣಿ ಪ್ರಮಾಣಪತ್ರವನ್ನು ಹಿಂತೆಗೆದುಕೊಳ್ಳುವುದರಿಂದ ಅಥವಾ ರದ್ದುಗೊಳಿಸುದುದರಿಂದ ಬಾಧಿತನಾದ ಯಾರೇ ವ್ಯಕ್ತಿಯು ನಿಯಮಿಸಬಹುದಾದಂಥ ಅವಧಿಯೊಳಗಾಗಿ,–

(ಎ) ವೃತ್ತಿ ಸಂಘದ ಪ್ರಧಾನ ಕಾರ್ಯಾಲಯವು ಪ್ರೆಸಿಡೆನ್ಸಿ ಪಟ್ಟಣದ ಪರಿಮಿತಿಯೊಳಗಿರುವಲ್ಲಿ ಉಚ್ಚ ನ್ಯಾಯಾಲಯಕ್ಕೆ; ಅಥವಾ

(ಎಎ) ಕೇಂದ್ರ ಕಚೇರಿಯು ಕಾರ್ಮಿಕ ನ್ಯಾಯಾಲಯ ಅಥವಾ ಕೈಗಾರಿಕಾ ನ್ಯಾಯಾಧಿಕರಣದ ಅಧಿಕಾರವ್ಯಾಪ್ತಿಯೊಳಗೆ ಬರುವ ಒಂದು ಪ್ರದೇಶದಲ್ಲಿ ಸ್ಥಾಪಿತಗೊಂಡಿದ್ದಲ್ಲಿ, ಸಂದರ್ಭಾನುಸಾರವಾಗಿ ಆ ನ್ಯಾಯಾಲಯಕ್ಕೆ ಅಥವಾ ನ್ಯಾಯಾಧಿಕರಣಕ್ಕೆ;

(ಬಿ) ಪ್ರಧಾನ ಕಾರ್ಯಾಲಯವು ಯಾವುದೇ ಇತರ ಪ್ರದೇಶದಲ್ಲಿರುವಲ್ಲಿ, ಸಮುಚಿತ ಸರ್ಕಾರವು ಈ ಸಂಬಂಧದಲ್ಲಿ ಆ ಪ್ರದೇಶಕ್ಕಾಗಿ ನಿಯೋಜಿಸಬಹುದಾದ ಮೂಲ ಅಧಿಕಾರವ್ಯಾಪ್ತಿಯ ಪ್ರಧಾನ ಸಿವಿಲ್ ನ್ಯಾಯಾಲಯದ ಅಡಿಷನಲ್ ಅಥವಾ ಸಹಾಯಕ ನ್ಯಾಯಾಧೀಶನ ನ್ಯಾಯಾಲಯಕ್ಕೆ ಕಡಿಮೆಯಿಲ್ಲದ ನ್ಯಾಯಾಲಯಕ್ಕೆ

– ಅಪೀಲನ್ನು ಸಲ್ಲಿಸಬಹುದು.

(2) ಅಪೀಲು ನ್ಯಾಯಾಲಯವು ಆ ಅಪೀಲನ್ನು ವಜಾ ಮಾಡಬಹುದು ಅಥವಾ ಸಂಘವನ್ನು ನೋಂದಾಯಿಸುವಂತೆ ಮತ್ತು 9ನೇ ಪ್ರಕರಣದ ಉಪಬಂಧಗಳ ಮೇರೆಗೆ ನೋಂದಣಿ ಪ್ರಮಾಣಪತ್ರವನ್ನು ಕೊಡುವಂತೆ ರಿಜಿಸ್ಟ್ರಾರನನ್ನು ನಿರ್ದೇಶಿಸಿ ಅಥವಾ ಸಂದರ್ಭಾನುಸಾರ ಪ್ರಮಾಣಪತ್ರವನ್ನು

ಹಿಂತೆಗೆದುಕೊಳ್ಳುವ ಅಥವಾ ರದ್ದುಗೊಳಿಸುವ ಆದೇಶವನ್ನು ತಳ್ಳಿ ಹಾಕಿ ಆದೇಶವನ್ನು ಮಾಡಬಹುದು ಮತ್ತು ರಿಜಿಸ್ಟ್ರಾರನು ಅಂಥ ಆದೇಶವನ್ನು ಪಾಲಿಸತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗಿನ ಅಪೀಲು ಉದ್ದೇಶಕ್ಕಾಗಿ ಅಪೀಲು ನ್ಯಾಯಾಲಯವು ಸಾಧ್ಯವಾಗಬಹುದಾದಷ್ಟರ ಮಟ್ಟಿಗೆ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ದಾವೆಯ ಅಧಿವಿಚಾರಣೆ ಮಾಡುವಾಗ ಅನುಸರಿಸುವ ಪ್ರಕ್ರಿಯೆಯನ್ನೇ ಅನುಸರಿಸತಕ್ಕದ್ದು ಮತ್ತು ಆಗ ಹೊಂದಿರುವ ಅಧಿಕಾರಗಳನ್ನೇ ಹೊಂದಿರತಕ್ಕದ್ದು ಮತ್ತು ಅಪೀಲಿನ ಪೂರ್ಣ ಖರ್ಚನ್ನು ಅಥವಾ ಅದರ ಯಾವುದೇ ಭಾಗವನ್ನು ಯಾರು ಸಂದಾಯ ಮಾಡತಕ್ಕದ್ದು ಎಂಬ ಬಗ್ಗೆ ನಿರ್ದೇಶಿಸಬಹುದು ಮತ್ತು ಅಂಥ ಖರ್ಚನ್ನು ಸದರಿ ಸಂಹಿತೆಯ ಮೇರೆಗೆ ದಾವೆಯಲ್ಲಿ ಕೊಡಲಾಗಿದ್ದರೆ ಹೇಗೋ ಹಾಗೆ ವಸೂಲು ಮಾಡತಕ್ಕದ್ದು.

(4) ಉಪಪ್ರಕರಣ (1)ರ (ಬಿ) ಖಂಡದ ಮೇರೆಗೆ ನೇಮಕಗೊಂಡ ಯಾವುದೇ ನ್ಯಾಯಾಲಯವು ಅಪೀಲನ್ನು ವಜಾ ಮಾಡಿದ ಸಂದರ್ಭದಲ್ಲಿ, ಬಾಧಿತನಾದ ವ್ಯಕ್ತಿಯು ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸುವ ಹಕ್ಕನ್ನು ಹೊಂದಿರತಕ್ಕದ್ದು ಮತ್ತು ಉಚ್ಚ ನ್ಯಾಯಾಲಯವು, ಅಂಥ ಅಪೀಲಿನ ಉದ್ದೇಶಕ್ಕಾಗಿ (2) ಮತ್ತು (3)ನೇ ಉಪಪ್ರಕರಣಗಳ ಮೇರೆಗೆ ಅಪೀಲು ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನೂ ಹೊಂದಿರತಕ್ಕದ್ದು ಮತ್ತು ಆ ಉಪಪ್ರಕರಣಗಳ ಉಪಬಂಧಗಳು ತದನುಸಾರವಾಗಿ ಅನ್ವಯವಾಗತಕ್ಕದ್ದು.

**12. ನೋಂದಾಯಿತ ಕಚೇರಿ.–** ನೋಂದಾಯಿತ ವೃತ್ತಿ ಸಂಘಕ್ಕೆ ಕಳುಹಿಸುವ ಎಲ್ಲಾ ಸಮಾಚಾರಗಳು ಮತ್ತು ನೋಟೀಸುಗಳನ್ನು ಅದರ ನೋಂದಾಯಿತ ಕಚೇರಿಗೆ ಕಳುಹಿಸತಕ್ಕದ್ದು. ಪ್ರಧಾನ ಕಚೇರಿಯು ವಿಳಾಸದಲ್ಲಿನ ಯಾವುದೇ ಬದಲಾವಣೆಯ ನೋಟೀಸನ್ನು ಅಂಥ ಬದಲಾವಣೆಯಾದ ಹದಿನಾಲ್ಕು ದಿನಗಳೊಳಗಾಗಿ ರಿಜಿಸ್ಟ್ರಾರನಿಗೆ ಬರಹದಲ್ಲಿ ಕೊಡತಕ್ಕದ್ದು ಮತ್ತು ಬದಲಾದ ವಿಳಾಸವನ್ನು 8ನೇ ಪ್ರಕರಣದಲ್ಲಿ ಉಲ್ಲೇಖಿಸಿದ ರಿಜಿಸ್ಟರಿನಲ್ಲಿ ದಾಖಲು ಮಾಡತಕ್ಕದ್ದು.

**13. ನೋಂದಾಯಿತ ವೃತ್ತಿ ಸಂಘಗಳನ್ನು ನಿಗಮನಗೊಳಿಸುವುದು.–** ಪ್ರತಿಯೊಂದು ನೋಂದಾಯಿತ ವೃತ್ತಿ ಸಂಘ ಅದು ಯಾವ ಹೆಸರಿನಲ್ಲಿ ನೋಂದಾಯಿತವಾಗಿದೆಯೋ ಆ ಹೆಸರಿನ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಶಾಶ್ವತ ಉತ್ತರಾಧಿಕಾರ ಹಾಗೂ ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಅರ್ಜಿಸುವ ಮತ್ತು ಧಾರಣ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರದೊಂದಿಗೆ ಸಾಮಾನ್ಯ ಮುದ್ರೆಯನ್ನು ಹೊಂದಿರತಕ್ಕದ್ದು ಮತ್ತು ಸದರಿ ಹೆಸರಿನಲ್ಲಿ ದಾವೆಯನ್ನು ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

**14. ಕೆಲವು ಅಧಿನಿಯಮಗಳು ನೋಂದಾಯಿತ ವೃತ್ತಿ ಸಂಘಗಳಿಗೆ ಅನ್ವಯಿಸತಕ್ಕದ್ದಲ್ಲ.–** ಕೆಳಕಂಡ ಅಧಿನಿಯಮಗಳು ಎಂದರೆ:–

(ಎ) ಸೊಸೈಟಿಗಳ ನೋಂದಣಿ ಅಧಿನಿಯಮ, 1860 (1860ರ 21);

(ಬಿ) ಸಹಕಾರ ಸಂಘಗಳ ಅಧಿನಿಯಮ, 1912 (1912ರ 2);

(ಸಿ) ಕಂಪನಿ ಅಧಿನಿಯಮ, 1956 (1956ರ 1)

– ಇವು ಯಾವುದೇ ನೋಂದಾಯಿತ ವೃತ್ತಿ ಸಂಘಕ್ಕೆ ಅನ್ವಯಿಸತಕ್ಕದ್ದಲ್ಲ ಮತ್ತು ಅಂಥ ಯಾವುದೇ ಅಧಿನಿಯಮದ ಮೇರೆಗಿನ ಅಂಥ ಯಾವುದೇ ವೃತ್ತಿ ಸಂಘದ ನೋಂದಣಿಯು ಶೂನ್ಯವಾಗತಕ್ಕದ್ದು.

## ಅಧ್ಯಾಯ III

## ನೋಂದಾಯಿತ ವೃತ್ತಿ ಸಂಘಗಳ ಹಕ್ಕುಗಳು ಮತ್ತು ಹೊಣೆಗಾರಿಕೆಗಳು

**15. ಸಾಮಾನ್ಯ ನಿಧಿಗಳನ್ನು ಖರ್ಚು ಮಾಡಬಹುದಾದ ಉದ್ದೇಶಗಳು.–** ನೋಂದಾಯಿತ ವೃತ್ತಿ ಸಂಘದ ಸಾಮಾನ್ಯ ನಿಧಿಗಳನ್ನು, ಕೆಳಕಂಡ ಉದ್ದೇಶಗಳಿಗಲ್ಲದೆ, ಯಾವುದೇ ಇತರ ಉದ್ದೇಶಗಳಿಗೆ ಖರ್ಚು ಮಾಡತಕ್ಕದ್ದಲ್ಲ, ಎಂದರೆ:–

(ಎ) ವೃತ್ತಿ ಸಂಘದ ಪದಾಧಿಕಾರಿಗಳ ಸಂಬಳಗಳು, ಭತ್ಯೆಗಳು ಮತ್ತು ವೆಚ್ಚಗಳ ಸಂದಾಯ;

(ಬಿ) ವೃತ್ತಿ ಸಂಘದ ಸಾಮಾನ್ಯ ನಿಧಿಗಳ, ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯೂ ಸೇರಿ ವೃತ್ತಿ ಸಂಘದ ಆಡಳಿತಕ್ಕಾಗಿ ವೆಚ್ಚಗಳ ಸಂದಾಯ;

(ಸಿ) ವೃತ್ತಿ ಸಂಘದ ಯಾವುದೇ ಹಕ್ಕುಗಳನ್ನು ಅಥವಾ ತನ್ನ ನಿಯೋಜಕನೊಂದಿಗೆ ಯಾರೇ ಸದಸ್ಯನ ಅಥವಾ ಸದಸ್ಯನು ನಿಯೋಜಿಸುವ ವ್ಯಕ್ತಿಯ ಸಂಬಂಧಗಳಿಂದ ಉದ್ಭವಿಸುವ ಯಾವುದೇ ಹಕ್ಕುಗಳನ್ನು ಪಡೆಯುವ ಅಥವಾ ಪರಿರಕ್ಷಿಸುವ ಉದ್ದೇಶಗಳಿಗಾಗಿ ಪ್ರಾಸಿಕ್ಯೂಷನ್ ಅಥವಾ ಪರಿರಕ್ಷಣೆಯನ್ನು ಕೈಗೊಂಡಿರುವಾಗ, ಯಾವ ಕಾನೂನು ವ್ಯವಹರಣೆಗೆ ವೃತ್ತಿ ಸಂಘ ಅಥವಾ ಅದರ ಯಾರೇ ಸದಸ್ಯನು ಪಕ್ಷಕಾರನಾಗಿರುವನೋ, ಆ ಯಾವುದೇ ಕಾನೂನು ವ್ಯವಹರಣೆಯ ಪ್ರಾಸಿಕ್ಯೂಷನ್ ಅಥವಾ ಪ್ರತಿರಕ್ಷೆ;

(ಡಿ) ವೃತ್ತಿ ಸಂಘದ ಅಥವಾ ಅದರ ಯಾರೇ ಸದಸ್ಯನ ಪರವಾಗಿ ವೃತ್ತಿ ವಿವಾದಗಳ ನಿರ್ವಹಣೆ;

(ಇ) ವೃತ್ತಿ ವಿವಾದಗಳಿಂದ ಉದ್ಭವಿಸುವ ನಷ್ಟಕ್ಕಾಗಿ ಸದಸ್ಯರುಗಳಿಗೆ ನಷ್ಟಪರಿಹಾರ;

(ಎಫ್) ಸದಸ್ಯರುಗಳಿಗೆ ಅಥವಾ ಅವರ ಅವಲಂಬಿತರಿಗೆ ಅಂಥ ಸದಸ್ಯರುಗಳ ಮರಣ, ವೃದ್ಧಾಪ್ಯ, ಖಾಯಿಲೆ, ಅಪಘಾತಗಳು ಅಥವಾ ನಿರುದ್ಯೋಗದ ಕಾರಣಕ್ಕಾಗಿ ಭತ್ಯೆಗಳು;

(ಜಿ) ಸದಸ್ಯರುಗಳ ಜೀವಗಳ ಮೇಲೆ ವಿಮಾ ಪಾಲಿಸಿಗಳನ್ನು ಕೊಡುವುದು ಅಥವಾ ಸದಸ್ಯರುಗಳ ಜೀವಗಳ ಮೇಲಿನ ವಿಮಾ ಪಾಲಿಸಿಗಳ ಮೇರೆಗೆ ಅಥವಾ ಖಾಯಿಲೆ, ಅಪಘಾತ ಅಥವಾ ನಿರುದ್ಯೋಗದ ಬಗ್ಗೆ ವಿಮೆ ಮಾಡಿಸುವ ಸದಸ್ಯರುಗಳ ಪಾಲಿಸಿಗಳ ಮೇರೆಗೆ ಹೊಣೆಗಾರಿಕೆಯನ್ನು ವಹಿಸಿಕೊಳ್ಳುವುದು;

(ಹೆಚ್) ಸದಸ್ಯರಿಗಾಗಿ ಅಥವಾ ಆ ಸದಸ್ಯರ ಅವಲಂಬಿತರಿಗಾಗಿ ಶೈಕ್ಷಣಿಕ, ಸಾಮಾಜಿಕ ಅಥವಾ ಧಾರ್ಮಿಕ ಪ್ರಯೋಜನಕ್ಕೆ (ಮೃತ ಸದಸ್ಯರ ಶವಸಂಸ್ಕಾರ ಅಥವಾ ಧಾರ್ಮಿಕ ಕರ್ಮಾಚರಣೆಗಳ ವೆಚ್ಚಗಳ ಸಂದಾಯವನ್ನೂ ಒಳಗೊಂಡು) ಏರ್ಪಾಟು;

(ಐ) ನಿಯೋಜಕರಿಗೆ ಅಥವಾ ಕೆಲಸಗಾರರಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಮುಖ್ಯವಾಗಿ ಚರ್ಚಿಸುವ ಉದ್ದೇಶಕ್ಕಾಗಿ ಪ್ರಕಟಗೊಳಿಸಲಾಗುತ್ತಿರುವ ಒಂದು ನಿಯತಕಾಲಿಕವನ್ನು ಸರಿಯಾಗಿ ಇಟ್ಟುಕೊಂಡು ಬರುವುದು;

(ಜೆ) ಯಾವ ಉದ್ದೇಶಗಳಿಗಾಗಿ ವೃತ್ತಿ ಸಂಘದ ಸಾಮಾನ್ಯ ನಿಧಿಗಳನ್ನು ಖರ್ಚು ಮಾಡಬಹುದೋ ಆ ಯಾವುದೇ ಉದ್ದೇಶಗಳನ್ನು ಮುಂದುವರಿಸುವುದಕ್ಕಾಗಿ ಸಾಮಾನ್ಯವಾಗಿ ಕೆಲಸಗಾರನ ಪ್ರಯೋಜನಕ್ಕೆಂದು ಉದ್ದೇಶಿತವಾದ ಯಾವುದೇ ಉದ್ದೇಶಕ್ಕಾಗಿ ವಂತಿಕೆಗಳ ಸಂದಾಯ: ಪರಂತು ಯಾವುದೇ ಹಣಕಾಸು ವರ್ಷದಲ್ಲಿ ಅಂಥ ವಂತಿಕೆಗಳಿಗೆ ಸಂಬಂಧಿಸಿದಂತೆ ವೆಚ್ಚಗಳು, ಆ ವರ್ಷದ ಯಾವುದೇ ಕಾಲದಲ್ಲಿ ಆ ಕಾಲದವರೆಗೆ ಕಾರ್ಮಿಕ ಸಂಘದ ಸಾಮಾನ್ಯ ನಿಧಿಗಳಿಗೆ ಒದಗಿಬಂದ ಒಟ್ಟು ಆದಾಯದ ಮತ್ತು ಆ ವರ್ಷದ ಪ್ರಾರಂಭದಲ್ಲಿ ಆ ನಿಧಿಗಳ ಜಮೆಯಲ್ಲಿನ ಶಿಲ್ಕಿನ ಸಂಯೋಜಿತ ಒಟ್ಟು ಮೊತ್ತದ ನಾಲ್ಕನೇ ಒಂದು ಭಾಗಕ್ಕಿಂತ ಹೆಚ್ಚಾಗಿರತಕ್ಕದ್ದಲ್ಲ; ಮತ್ತು

(ಕೆ) ಅಧಿಸೂಚನೆಯಲ್ಲಿ ಅಡಕವಾಗಿರುವ ಯಾವುದೇ ಷರತ್ತಿಗೊಳಪಟ್ಟು, ಸಮುಚಿತ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸಿದ ಯಾವುದೇ ಇತರ ಉದ್ದೇಶ.

**16. ರಾಜಕೀಯ ಉದ್ದೇಶಗಳಿಗಾಗಿ ಪ್ರತ್ಯೇಕ ನಿಧಿಯ ಸ್ಥಾಪನೆ.–** (1) ನೋಂದಾಯಿತ ವೃತ್ತಿ ಸಂಘವು ಪ್ರತ್ಯೇಕ ನಿಧಿಯೊಂದನ್ನು ಪ್ರತ್ಯೇಕವಾಗಿ ವಿಧಿಸಿದ ಅಥವಾ ಆ ನಿಧಿಗೆ ಪ್ರತ್ಯೇಕವಾಗಿ ಕೊಟ್ಟ ವಂತಿಕೆಗಳಿಂದ ಸ್ಥಾಪಿಸಬಹುದು. ಉಪಪ್ರಕರಣ (2)ರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಉದ್ದೇಶವನ್ನು ಮುಂದುವರಿಸುವಲ್ಲಿ ಅದರ ಸದಸ್ಯರ ನಾಗರಿಕ ಮತ್ತು ರಾಜಕೀಯ ಹಿತಾಸಕ್ತಿಗಳ ಏಳಿಗೆಗಾಗಿ ಅದರಿಂದ ಸಂದಾಯಗಳನ್ನು ಮಾಡಬಹುದು.

(2) ಉಪಪ್ರಕರಣ (1)ರಲ್ಲಿ ಉಲ್ಲೇಖಿತವಾದ ಉದ್ದೇಶಗಳು ಯಾವುವೆಂದರೆ:–

(ಎ) ಸಂವಿಧಾನದ ಮೇರೆಗೆ ರಚಿತವಾದ ಯಾವುದೇ ವಿಧಾಯೀ ನಿಕಾಯದ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದ ಸದಸ್ಯನೆಂದು ಚುನಾಯಿತನಾಗಲು ಅಭ್ಯರ್ಥಿಯು ಅಥವಾ ಭಾವಿ ಅಭ್ಯರ್ಥಿಯು ತನ್ನ ಅಭ್ಯರ್ಥಿಕೆಯ ಅಥವಾ ಚುನಾವಣೆಯ ಸಂಬಂಧದಲ್ಲಿ ಚುನಾವಣೆಗೆ ಮುಂಚೆ ಚುನಾವಣೆಯ ಕಾಲದಲ್ಲಿ ಅಥವಾ ಆನಂತರ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ವಹಿಸಿದ ಯಾವುದೇ ವೆಚ್ಚಗಳ ಸಂದಾಯ; ಅಥವಾ

(ಬಿ) ಅಂಥ ಯಾರೇ ಅಭ್ಯರ್ಥಿ ಅಥವಾ ಭಾವಿ ಅಭ್ಯರ್ಥಿಯನ್ನು ಬೆಂಬಲಿಸಲು ಯಾವುದೇ ಸಭೆಯನ್ನು ನಡೆಸುವುದು ಅಥವಾ ಯಾವುದೇ ಸಾಹಿತ್ಯ ಅಥವಾ ದಸ್ತಾವೇಜುಗಳನ್ನು ವಿತರಣೆ ಮಾಡುವುದು; ಅಥವಾ

(ಸಿ) ಸಂವಿಧಾನದ ಮೇರೆಗೆ ರಚಿತವಾದ ಯಾವುದೇ ವಿಧಾಯೀ ನಿಕಾಯದ ಸದಸ್ಯನಾಗಿರುವ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದ ಸದಸ್ಯನಾಗಿರುವ ಯಾರೇ ವ್ಯಕ್ತಿಯ ಪೋಷಣೆ; ಅಥವಾ

(ಡಿ) ಸಂವಿಧಾನದ ಮೇರೆಗೆ ರಚಿತವಾದ ಯಾವುದೇ ವಿಧಾಯೀ ನಿಕಾಯಕ್ಕೆ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಮತದಾರರ ನೋಂದಣಿ ಅಥವಾ ಅಭ್ಯರ್ಥಿಯ ಆಯ್ಕೆ; ಅಥವಾ

(ಇ) ಯಾವುದೇ ಬಗೆಯ ರಾಜಕೀಯ ಸಭೆಗಳನ್ನು ನಡೆಸುವುದು ಅಥವಾ ಯಾವುದೇ ಬಗೆಯ ರಾಜಕೀಯ ಸಾಹಿತ್ಯ ಅಥವಾ ರಾಜಕೀಯ ದಸ್ತಾವೇಜುಗಳನ್ನು ವಿತರಣೆ ಮಾಡುವುದು.

(2ಎ) ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅದನ್ನು ಅನ್ವಯಿಸುವಲ್ಲಿ, ಸಂವಿಧಾನದ ಮೇರೆಗೆ ರಚಿತವಾದ ಯಾವುದೇ ವಿಧಾಯೀ ನಿಕಾಯಕ್ಕೆ (2)ನೇ ಉಪಪ್ರಕರಣದಲ್ಲಿ ಮಾಡಿದ ಉಲ್ಲೇಖಗಳು, ಅವು ರಾಜ್ಯದ ವಿಧಾನಮಂಡಲಕ್ಕೆ ಉಲ್ಲೇಖಗಳನ್ನು ಒಳಗೊಂಡಿರುವಂತೆ ಅರ್ಥೈಸತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ಸ್ಥಾಪಿತವಾದ ನಿಧಿಗೆ ವಂತಿಗೆಯನ್ನು ಕೊಡಲು ಯಾರೇ ಸದಸ್ಯನನ್ನು ಒತ್ತಾಯಪಡಿಸತಕ್ಕದ್ದಲ್ಲ ಮತ್ತು ಸದರಿ ನಿಧಿಗೆ ವಂತಿಕೆಯನ್ನು ಕೊಡದ ಸದಸ್ಯನನ್ನು ಕಾರ್ಮಿಕ ಸಂಘದ ಯಾವುದೇ ಪ್ರಯೋಜನಗಳಿಂದ ಹೊರತುಪಡಿಸತಕ್ಕದ್ದಲ್ಲ ಅಥವಾ ಸದರಿ ನಿಧಿಗೆ ತನ್ನ ವಂತಿಗೆಯನ್ನು ಕೊಡಲಿಲ್ಲವೆಂಬ ಕಾರಣದಿಂದ ವೃತ್ತಿ ಸಂಘದ ಇತರ ಸದಸ್ಯರೊಡನೆ (ಸದರಿ ನಿಧಿಯ ನಿಯಂತ್ರಣ ಅಥವಾ ವ್ಯವಸ್ಥಾಪನೆಗೆ ಸಂಬಂಧಿಸಿದ್ದನ್ನು ಹೊರತುಪಡಿಸಿ) ಅವನನ್ನು ಪ್ರತ್ಯಕ್ಷವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಯಾವುದೇ ಬಗೆಯ ಯಾವುದೇ ಅಸಮರ್ಥತೆಗೆ ಅಥವಾ ಯಾವುದೇ

ಅನಾನುಕೂಲತೆಗೆ ಒಳಪಡಿಸತಕ್ಕದ್ದಲ್ಲ ಮತ್ತು ಸದರಿ ನಿಧಿಗೆ ವಂತಿಗೆ ಕೊಡುವುದನ್ನು ವೃತ್ತಿ ಸಂಘದ ಪ್ರವೇಶಕ್ಕಾಗಿ ಷರತ್ತನ್ನಾಗಿಸತಕ್ಕದ್ದಲ್ಲ.

**17. ವೃತ್ತಿ ವಿವಾದಗಳಲ್ಲಿ ಅಪರಾಧಿಕ ಒಳಸಂಚು.–** ನೋಂದಾಯಿತ ಕಾರ್ಮಿಕ ಸಂಘದ ಯಾರೇ ಪದಾಧಿಕಾರಿ ಅಥವಾ ಸದಸ್ಯನು 15ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂಥ ಕಾರ್ಮಿಕ ಸಂಘದ ಯಾವುದೇ ಉದ್ದೇಶವನ್ನು ಮುಂದುವರಿಸುವುದಕ್ಕಾಗಿ ಸದಸ್ಯರ ನಡುವೆ ಮಾಡಿಕೊಂಡ ಯಾವುದೇ ಒಪ್ಪಂದಕ್ಕೆ ಸಂಬಂಧಿಸಿದಂತೆ, ಆ ಒಪ್ಪಂದವು ಅಪರಾಧವನ್ನು ಮಾಡುವುದಕ್ಕಾಗಿನ ಒಪ್ಪಂದವಾಗಿದ್ದ ಹೊರತು, ಭಾರತ ದಂಡ ಸಂಹಿತೆ, 1860 (1860ರ 45)ರ 120ಬಿ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ದಂಡನೆಗೆ ಗುರಿಯಾಗತಕ್ಕದ್ದಲ್ಲ.

**18. ಕೆಲವು ಸಂದರ್ಭಗಳಲ್ಲಿ ಸಿವಿಲ್ ದಾವೆಗಳಿಂದ ಉನ್ಮುಕ್ತಿ.–** (1) ಯಾವುದೇ ನೋಂದಾಯಿತ ವೃತ್ತಿ ಸಂಘದ ಅಥವಾ ಅದರ ಯಾರೇ ಪದಾಧಿಕಾರಿ ಅಥವಾ ಸದಸ್ಯನ ವಿರುದ್ಧ ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ ವೃತ್ತಿ ಸಂಘದ ಸದಸ್ಯನು ಪಕ್ಷಕಾರನಾಗಿರುವ ವೃತ್ತಿ ವಿವಾದದ ನಿರೀಕ್ಷಣೆಯಲ್ಲಿ ಅಥವಾ ಅದರ ಮುಂದುವರಿಕೆಯಲ್ಲಿ ಮಾಡಲಾದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ, ಅಂಥ ಕಾರ್ಯವು ನಿಯೋಜನೆಯ ಕರಾರನ್ನು ಮುರಿಯಲು ಬೇರೆ ಇತರ ವ್ಯಕ್ತಿಯನ್ನು ಪ್ರೇರೇಪಿಸುತ್ತದೆ ಅಥವಾ ಬೇರೆ ಇತರ ವ್ಯಕ್ತಿಯ ವೃತ್ತಿ, ವ್ಯವಹಾರ ಅಥವಾ ನಿಯೋಜನೆಯಲ್ಲಿ ಅಥವಾ ಬೇರೆ ಇತರ ವ್ಯಕ್ತಿಯು ತನ್ನ ಬಂಡವಾಳವನ್ನು ಅಥವಾ ತನ್ನ ಕಾರ್ಮಿಕರನ್ನು ತನ್ನ ಇಚ್ಛೆಯಂತೆ ವಿಲೆ ಮಾಡುವ ಹಕ್ಕಿನೊಂದಿಗೆ ಹಸ್ತಕ್ಷೇಪ ಮಾಡುತ್ತದೆ ಎಂಬ ಕಾರಣ ಮಾತ್ರದಿಂದಲೇ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಗಳು ಅರ್ಜಿತವಾಗತಕ್ಕದ್ದಲ್ಲ.

(2) ನೋಂದಾಯಿತ ವೃತ್ತಿ ಸಂಘವು, ವೃತ್ತಿ ಸಂಘದ ಏಜೆಂಟನು ವೃತ್ತಿ ವಿವಾದದ ನಿರೀಕ್ಷಣೆಯಲ್ಲಿ ಅಥವಾ ಅದರ ಮುಂದುವರಿಕೆಯಲ್ಲಿ ಮಾಡಿದ ಯಾವುದೇ ಅಪಕೃತ್ಯಕ್ಕೆ ಸಂಬಂಧಿಸಿದಂತೆ, ಅಂಥ ವ್ಯಕ್ತಿಯು ವೃತ್ತಿ ಸಂಘದ ಕಾರ್ಯನಿರ್ವಾಹಕಕ್ಕೆ ತಿಳಿಯದೆ ಅಥವಾ ಅದು ಕೊಟ್ಟ ಅನುದೇಶಗಳಿಗೆ ವಿರುದ್ಧವಾಗಿ ಕಾರ್ಯ ಮಾಡಿದ್ದಾರೆಂದು ರುಜುವಾತಾದರೆ, ಯಾವುದೇ ಸಿವಿಲ್ ನ್ಯಾಯಾಲಯದಲ್ಲಿನ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಗಳಿಗೆ ಗುರಿಯಾಗತಕ್ಕದ್ದಲ್ಲ.

**19. ಒಪ್ಪಂದಗಳ ಜಾರಿಗೊಳಿಸುವಿಕೆ.–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ನೋಂದಾಯಿತ ವೃತ್ತಿ ಸಂಘದ ಸದಸ್ಯರ ನಡುವಣ ಒಪ್ಪಂದವು, ಆ ಒಪ್ಪಂದದ ಯಾವುದೇ ಉದ್ದೇಶವು ವ್ಯಾಪಾರವನ್ನು ನಿಗ್ರಹಿಸುತ್ತದೆ ಎಂಬ ಸಂಗತಿಯ ಕಾರಣ ಮಾತ್ರದಿಂದಲೇ ಶೂನ್ಯವಾಗತಕ್ಕದ್ದಲ್ಲ ಅಥವಾ ಶೂನ್ಯ ಕರಣೀಯವಾಗತಕ್ಕದ್ದಲ್ಲ:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ವೃತ್ತಿ ಸಂಘದ ಯಾರೇ ಸದಸ್ಯರು ಅವರ ಸರಕುಗಳನ್ನು ಮಾರತಕ್ಕ ಅಥವಾ ಮಾರದಿರತಕ್ಕ ವ್ಯವಹಾರವನ್ನು ನಡೆಸತಕ್ಕ ಅಥವಾ ನಡೆಸದಿರತಕ್ಕ, ಕೆಲಸ ಮಾಡತಕ್ಕ ಅಥವಾ ಮಾಡದಿರತಕ್ಕ ಅಥವಾ ನಿಯೋಜನೆಯನ್ನು ಮಾಡತಕ್ಕ ಅಥವಾ ಮಾಡದಿರತಕ್ಕ ಷರತ್ತುಗಳಿಗೆ ಸಂಬಂಧಿಸಿದ ಯಾವುದೇ ಒಪ್ಪಂದದ ಉಲ್ಲಂಘನೆಗಾಗಿ ಹಾನಿ ಪರಿಹಾರಗಳನ್ನು ಜಾರಿಗೊಳಿಸುವ ಅಥವಾ ವಸೂಲ್ಮಾಡುವ ವ್ಯಕ್ತ ಉದ್ದೇಶಕ್ಕಾಗಿ ಹೂಡಲಾದ ಯಾವುದೇ ಕಾನೂನು ವ್ಯವಹರಣೆಗಳನ್ನು ಪುರಸ್ಕರಿಸಲು ಸಿವಿಲ್ ನ್ಯಾಯಾಲಯವನ್ನು ಸಮರ್ಥಗೊಳಿಸತಕ್ಕದ್ದಲ್ಲ.

**20. ವೃತ್ತಿ ಸಂಘದ ಪುಸ್ತಕಗಳನ್ನು ಪರಿಶೀಲಿಸುವ ಹಕ್ಕು.–** ವೃತ್ತಿ ಸಂಘದ ಪದಾಧಿಕಾರಿ ಅಥವಾ ಸದಸ್ಯನು ವೃತ್ತಿ ಸಂಘದ ನಿಯಮಗಳಲ್ಲಿ ಉಪಬಂಧಿಸಬಹುದಾದಂಥ ಕಾಲಗಳಲ್ಲಿ ನೋಂದಾಯಿತ ವೃತ್ತಿ ಸಂಘದ ಲೆಕ್ಕ ಪುಸ್ತಕಗಳನ್ನು ಮತ್ತು ಅದರ ಸದಸ್ಯರ ಪಟ್ಟಿಯನ್ನು ಪರಿಶೀಲಿಸಲು ಅವಕಾಶವಿರತಕ್ಕದ್ದು.

**21. ವೃತ್ತಿ ಸಂಘಗಳ ಸದಸ್ಯತ್ವಕ್ಕೆ ಅಪ್ರಾಪ್ತ ವಯಸ್ಕರ ಹಕ್ಕುಗಳು.–** ಹದಿನೈದು ವರ್ಷಗಳು ತುಂಬಿರುವ ಯಾರೇ ವ್ಯಕ್ತಿಯು, ತದ್ವಿರುದ್ಧವಾಗಿ ವೃತ್ತಿ ಸಂಘದ ಯಾವುದೇ ನಿಯಮಗಳಿಗೊಳಪಟ್ಟು, ನೋಂದಾಯಿತ ವೃತ್ತಿ ಸಂಘದ ಸದಸ್ಯನಾಗಬಹುದು ಮತ್ತು ಹಿಂದೆ ಹೇಳಿದುದಕ್ಕೆ ಒಳಪಟ್ಟು ಸದಸ್ಯನ ಎಲ್ಲಾ ಹಕ್ಕುಗಳನ್ನು ಉಪಭೋಗಿಸಬಹುದು ಮತ್ತು ನಿಯಮಗಳ ಮೇರೆಗೆ ಬರೆದುಕೊಡಲು ಅವಶ್ಯಕವಾದ ಎಲ್ಲಾ ಲಿಖಿತಗಳನ್ನು ಬರೆದು ಕೊಡಬಹುದು ಅಥವಾ ಕೊಡಲು ಅವಶ್ಯವಾದ ಎಲ್ಲಾ ತೀರುವಳಿಗಳನ್ನು ಕೊಡಬಹುದು.

**21ಎ. ವೃತ್ತಿ ಸಂಘಗಳ ಪದಾಧಿಕಾರಿಗಳ ಅನರ್ಹತೆಗಳು.–** (1) ಯಾರೇ ವ್ಯಕ್ತಿಯು,–

(i) ಅವನಿಗೆ ಹದಿನೆಂಟು ವರ್ಷಗಳು ತುಂಬಿರದಿದ್ದರೆ;

(ii) ಅವನು ನೈತಿಕ ಪತನವನ್ನೊಳಗೊಳ್ಳುವ ಯಾವುದೇ ಅಪರಾಧಕ್ಕಾಗಿ ಭಾರತದಲ್ಲಿನ ಒಂದು ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾಗಿ ಕಾರಾವಾಸದ ದಂಡನೆಗೆ ಗುರಿಯಾಗಿದ್ದರೆ, ಅವನು ಬಿಡುಗಡೆಯಾದ ಮೇಲೆ ಐದು ವರ್ಷಗಳ ಅವಧಿಯು ಮುಕ್ತಾಯದ ಹೊರತು

– ನೋಂದಾಯಿತ ವೃತ್ತಿ ಸಂಘದ ಕಾರ್ಯನಿರ್ವಾಹಕದ ಸದಸ್ಯನಾಗಿ ಅಥವಾ ಯಾವುದೇ ಇತರ ಪದಾಧಿಕಾರಿಯಾಗಿ ಆಯ್ಕೆ ಹೊಂದಲು ಮತ್ತು ಹಾಗೆ ಕಾರ್ಯನಿರ್ವಾಹಕದ ಸದಸ್ಯನಾಗಿರಲು ಅಥವಾ ಯಾವುದೇ ಇತರ ಪದಾಧಿಕಾರಿಯಾಗಿರಲು ಅನರ್ಹನಾಗತಕ್ಕದ್ದು.

(2) ಭಾರತ ವೃತ್ತಿ ಸಂಘಗಳ (ತಿದ್ದುಪಡಿ) ಅಧಿನಿಯಮ, 1964 (1964ರ 38)ರ ಪ್ರಾರಂಭಕ್ಕೆ ಮುಂಚೆ ನೋಂದಾಯಿತ ವೃತ್ತಿ ಸಂಘದ ಕಾರ್ಯನಿರ್ವಾಹಕದ ಯಾರೇ ಸದಸ್ಯನು ಅಥವಾ ಇತರ

ಪದಾಧಿಕಾರಿಯು ನೈತಿಕ ಪತನವನ್ನೊಳಗೊಳ್ಳುವ ಯಾವುದೇ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿ ಕಾರಾವಾಸದ ದಂಡನೆಗೆ ಗುರಿಯಾಗಿದ್ದರೆ, ಅಂಥ ಪ್ರಾರಂಭದ ದಿನಾಂಕದಂದು, ಆ ದಿನಾಂಕಕ್ಕೆ ಮೊದಲು ಅವನ ಬಿಡುಗಡೆಯಾದ ಮೇಲೆ ಐದು ವರ್ಷಗಳ ಅವಧಿಯು ಮುಕ್ತಾಯವಾದ ಹೊರತು ಅಂಥ ಸದಸ್ಯ ಅಥವಾ ಪದಾಧಿಕಾರಿಯಾಗಿರುವುದು ನಿಂತುಹೋಗತಕ್ಕದ್ದು.

(3) ಇದನ್ನು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅನ್ವಯಿಸುವಲ್ಲಿ ಭಾರತ ವೃತ್ತಿ ಸಂಘಗಳ (ತಿದ್ದುಪಡಿ) ಅಧಿನಿಯಮ, 1964 (1964ರ 38)ರ ಪ್ರಾರಂಭಕ್ಕೆ (2)ನೇ ಉಪಪ್ರಕರಣದಲ್ಲಿ ಮಾಡಿದ ಉಲ್ಲೇಖವನ್ನು ಸದರಿ ರಾಜ್ಯದಲ್ಲಿ ಈ ಅಧಿನಿಯಮದ ಪ್ರಾರಂಭಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**22. ಕೈಗಾರಿಕೆಗೆ ಸಂಬಂಧಿಸಿದಂತೆ ಇರಬೇಕಾದ ಪದಾಧಿಕಾರಿಗಳ ಪ್ರಮಾಣಾನುಪಾತ.–** ಪ್ರತಿಯೊಂದು ನೋಂದಾಯಿತ ವೃತ್ತಿ ಸಂಘದ ಪದಾಧಿಕಾರಿಗಳ ಒಟ್ಟು ಸಂಖ್ಯೆಯ ಅರ್ಧಕ್ಕೆ ಕಡಿಮೆಯಿಲ್ಲದಷ್ಟು ಜನರು ವೃತ್ತಿ ಸಂಘಕ್ಕೆ ಸಂಬಂಧಿಸಿದ ಕೈಗಾರಿಕೆಯಲ್ಲಿ ವಾಸ್ತವವಾಗಿ ತೊಡಗಿರುವ ಅಥವಾ ನಿಯೋಜಿತರಾಗಿರುವ ವ್ಯಕ್ತಿಗಳಾಗಿರತಕ್ಕದ್ದು:

ಪರಂತು, ಸಮುಚಿತ ಸರ್ಕಾರವು ವಿಶೇಷ ಅಥವಾ ಸಾಮಾನ್ಯ ಆದೇಶದ ಮೂಲಕ ಈ ಪ್ರಕರಣದ ಉಪಬಂಧಗಳು ಆ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವೃತ್ತಿ ಸಂಘ ಅಥವಾ ವೃತ್ತಿ ಸಂಘಗಳ ವರ್ಗಕ್ಕೆ ಅನ್ವಯಿಸತಕ್ಕದ್ದಲ್ಲವೆಂದು ಘೋಷಿಸಬಹುದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ "ಅಸಂಘಟಿತ ವಲಯ" ಎಂದರೆ, ಸಮುಚಿತ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಯಾವುದೇ ವಲಯ.

(2) ಉಪಪ್ರಕರಣ (1)ರಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಉಳಿದು, ಪದಾಧಿಕಾರಿಗಳ ಒಟ್ಟು ಸಂಖ್ಯೆಯ ಮೂರನೇ ಒಂದರಷ್ಟು ಅಥವಾ ಐದು ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಹೊರತುಪಡಿಸಿ, ನೋಂದಾಯಿತ ವೃತ್ತಿ ಸಂಘದ ಎಲ್ಲಾ ಪದಾಧಿಕಾರಿಗಳು ಅಥವಾ ವೃತ್ತಿ ಸಂಘವು ಸಂಬಂಧಪಡುವ ಉದ್ಯಮ ಅಥವಾ ಕೈಗಾರಿಕೆಯಲ್ಲಿ ವಾಸ್ತವಿಕವಾಗಿ ಕೆಲಸ ಮಾಡುವ ಅಥವಾ ನಿಯೋಜಿತನಾಗಿರುವ ವ್ಯಕ್ತಿಗಳಾಗಿರತಕ್ಕದ್ದು.

**ವಿವರಣೆ.–** ಈ ಉಪಪ್ರಕರಣದ ಉದ್ದೇಶಗಳಿಗಾಗಿ ನಿವೃತ್ತಿಯಾದ ಅಥವಾ ತೆಗೆದುಹಾಕಲಾದ ನೌಕರರನ್ನು ವೃತ್ತಿ ಸಂಘದಲ್ಲಿ ಒಂದು ಪದವನ್ನು ಹೊಂದುವ ಉದ್ದೇಶಕ್ಕಾಗಿ ಹೊರಗಿನವನೆಂದು ಭಾವಿಸತಕ್ಕದ್ದಲ್ಲ.

(3) ಒಕ್ಕೂಟ ಅಥವಾ ಒಂದು ರಾಜ್ಯದಲ್ಲಿ ಮಂತ್ರಿ ಪರಿಷತ್ತಿನ ಯಾರೇ ಸದಸ್ಯನು ಅಥವಾ (ವೃತ್ತಿ ಸಂಘವು ಸಂಬಂಧಪಟ್ಟಿರುವ ಉದ್ಯಮ ಅಥವಾ ಕೈಗಾರಿಕೆಯಲ್ಲಿ ಕೆಲಸ ಮಾಡುತ್ತಿಲ್ಲದ ಅಥವಾ ನಿಯೋಜಕನಾಗಿರದ) ಲಾಭದಾಯಕ ಹುದ್ದೆಯನ್ನು ಹೊಂದಿರುವ ಒಬ್ಬ ವ್ಯಕ್ತಿಯು ನೋಂದಾಯಿತ ವೃತ್ತಿ ಸಂಘದ ಕಾರ್ಯಕಾರಿ ಸದಸ್ಯನಾಗತಕ್ಕದ್ದಲ್ಲ ಅಥವಾ ಇತರೆ ಪದಾಧಿಕಾರಿಯಾಗತಕ್ಕದ್ದಲ್ಲ.

**23. ಹೆಸರಿನ ಬದಲಾವಣೆ.–** ಯಾವುದೇ ನೊಂದಾಯಿತ ವೃತ್ತಿ ಸಂಘವು ತನ್ನ ಸದಸ್ಯರ ಒಟ್ಟು ಸಂಖ್ಯೆಯು ಮೂರನೇ ಎರಡಕ್ಕಿಂತ ಕಡಿಮೆಯಿಲ್ಲದಷ್ಟು ಸದಸ್ಯರ ಸಮ್ಮತಿಯೊಂದಿಗೆ ಮತ್ತು 25ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು ತನ್ನ ಹೆಸರನ್ನು ಬದಲಾಯಿಸಿಕೊಳ್ಳಬಹುದು.

**24. ವೃತ್ತಿ ಸಂಘಗಳ ಸಮ್ಮಿಲನ.–** ಯಾವುದೇ ಎರಡು ಅಥವಾ ಹೆಚ್ಚು ನೋಂದಾಯಿತ ವೃತ್ತಿ ಸಂಘಗಳು ಅಂಥ ವೃತ್ತಿ ಸಂಘಗಳ ಅಥವಾ ಅವುಗಳ ಪೈಕಿ ಯಾವುದೇ ಒಂದರ ವಿಘಟನೆಯೊಂದಿಗೆ ಅಥವಾ ವಿಘಟನೆ ಇಲ್ಲದೆ ಅಥವಾ ಅಂಥ ವೃತ್ತಿ ಸಂಘಗಳ ಅಥವಾ ಅವುಗಳ ಪೈಕಿ ಯಾವುದೇ ಒಂದರ ನಿಧಿಗಳ ವಿಭಜನೆಯೊಂದಿಗೆ ಅಥವಾ ವಿಭಜನೆ ಇಲ್ಲದೆ ಒಟ್ಟಿಗೆ ಒಂದು ನೋಂದಾಯಿತ ಸಂಘವಾಗಿ ಸಮ್ಮಿಲನಗೊಳ್ಳಬಹುದು: ಪರಂತು ಅಂಥ ಪ್ರತಿಯೊಂದು ವೃತ್ತಿ ಸಂಘ ಅಥವಾ ಎಲ್ಲಾ ವೃತ್ತಿ ಸಂಘಗಳ ಮತ ನೀಡಲು ಹಕ್ಕುಳ್ಳ ಸದಸ್ಯರ ಕೊನೆಯ ಪಕ್ಷ ಅರ್ಧದಷ್ಟು ಮತಗಳನ್ನು ದಾಖಲು ಮಾಡಿರಬೇಕು ಮತ್ತು ದಾಖಲು ಮಾಡಿದ ಮತಗಳಲ್ಲಿ ಕೊನೆಯ ಪಕ್ಷ ಶೇಕಡಾ ಅರವತ್ತರಷ್ಟು ಮತಗಳು ಪ್ರಸ್ತಾವದ ಪರವಾಗಿರಬೇಕು.

**25. ಹೆಸರಿನ ಬದಲಾವಣೆ ಅಥವಾ ಸಮ್ಮಿಲನದ ಬಗ್ಗೆ ನೋಟೀಸು.–** (1) ಹೆಸರಿನ ಬದಲಾವಣೆಯ ಸಂದರ್ಭದಲ್ಲಿ ತನ್ನ ಹೆಸರನ್ನು ಬದಲಾಯಿಸಿಕೊಳ್ಳುವ ವೃತ್ತಿ ಸಂಘದ ಕಾರ್ಯದರ್ಶಿ ಮತ್ತು ಏಳು ಮಂದಿ ಸದಸ್ಯರು ಮತ್ತು ಸಮ್ಮಿಲನದ ಸಂದರ್ಭದಲ್ಲಿ ಅದಕ್ಕೆ ಪಕ್ಷಕಾರನಾಗಿರುವ ಅಂಥ ಪ್ರತಿಯೊಂದು ವೃತ್ತಿ ಸಂಘ ಮತ್ತು ಎಲ್ಲಾ ವೃತ್ತಿ ಸಂಘಗಳ ಕಾರ್ಯದರ್ಶಿ ಮತ್ತು ಏಳು ಜನ ಸದಸ್ಯರು ರುಜು ಮಾಡಿದ ಪ್ರತಿಯೊಂದು ಹೆಸರಿನ ಬದಲಾವಣೆಯ ಮತ್ತು ಪ್ರತಿಯೊಂದು ಸಮ್ಮಿಲನದ ಬಗ್ಗೆ ಬರಹದಲ್ಲಿನ ನೋಟೀಸನ್ನು ರಿಜಿಸ್ಟ್ರಾರನಿಗೆ ಮತ್ತು ಸಮ್ಮಿಲನಗೊಂಡ ವೃತ್ತಿ ಸಂಘದ ಪ್ರಧಾನ ಕಚೇರಿಯು ಬೇರೆ ರಾಜ್ಯದಲ್ಲಿದ್ದರೆ ಅಂಥ ರಾಜ್ಯದ ರಿಜಿಸ್ಟ್ರಾರನಿಗೆ ಕಳುಹಿಸತಕ್ಕದ್ದು.

(2) ಪ್ರಸ್ತಾಪಿತ ಹೆಸರು, ಈಗಾಗಲೇ ನೋಂದಾಯಿತವಾಗಿ ಅಸ್ತಿತ್ವದಲ್ಲಿರುವ ಯಾವುದೇ ಇತರ ವೃತ್ತಿ ಸಂಘದ ಹೆಸರಿನಂತೆ ಇದ್ದರೆ ಅಥವಾ ರಿಜಿಸ್ಟ್ರಾರನ ಅಭಿಪ್ರಾಯದಲ್ಲಿ ಅಂಥ ಹೆಸರು ಸಾರ್ವಜನಿಕರನ್ನು ಅಥವಾ ಎರಡೂ ವೃತ್ತಿ ಸಂಘದ ಸದಸ್ಯರನ್ನು ವಂಚಿಸುವ ಸಂಭವ ಇರುವಂಥ ಹೆಸರನ್ನು ಹೆಚ್ಚು ಕಡಿಮೆ ಹೋಲುವಂತಿದ್ದರೆ, ರಿಜಿಸ್ಟ್ರಾರನು ಹೆಸರಿನ ಬದಲಾವಣೆಯ ನೋಂದಣಿಯನ್ನು ನಿರಾಕರಿಸತಕ್ಕದ್ದು.

(3) ಉಪಪ್ರಕರಣ (2)ರಲ್ಲಿ ಉಪಬಂಧಿಸಿರುವುದನ್ನು ಉಳಿದು, ಹೆಸರು ಬದಲಾವಣೆಗೆ ಸಂಬಂಧಿಸಿದಂತೆ ಈ ಅಧಿನಿಯಮದ ಉಪಬಂಧಗಳನ್ನು ಪಾಲಿಸಲಾಗಿದೆಯೆಂದು ರಿಜಿಸ್ಟ್ರಾರನಿಗೆ ಮನದಟ್ಟಾದರೆ, ಅವನು 8ನೇ ಪ್ರಕರಣದಲ್ಲಿ ಉಲ್ಲೇಖಿಸಿದ ರಿಜಿಸ್ಟರಿನಲ್ಲಿ ಹೆಸರಿನ ಬದಲಾವಣೆಯನ್ನು ನೋಂದಾಯಿಸತಕ್ಕದ್ದು ಮತ್ತು ಅಂಥ ನೋಂದಣಿಯ ದಿನಾಂಕದಿಂದ ಹೆಸರಿನ ಬದಲಾವಣೆಯು ಪರಿಣಾಮಕಾರಿಯಾಗಿರತಕ್ಕದ್ದು.

(4) ಸಮ್ಮಿಲನಗೊಂಡ ವೃತ್ತಿ ಸಂಘದ ಪ್ರಧಾನ ಕಚೇರಿಯು ಯಾವ ರಾಜ್ಯದಲ್ಲಿರುವುದೋ ಆ ರಾಜ್ಯದ ರಿಜಿಸ್ಟ್ರಾರನು ಸಮ್ಮಿಲನಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಉಪಬಂಧಗಳನ್ನು ಪಾಲಿಸಲಾಗಿದೆಯೆಂದು ಮತ್ತು ಈ ಮೂಲಕ ರಚಿತವಾದ ವೃತ್ತಿ ಸಂಘದ 6ನೇ ಪ್ರಕರಣದ ಮೇರೆಗೆ ಉಪಬಂಧಿಸಿರುವ ರೀತಿಯಲ್ಲಿ ವೃತ್ತಿ ಸಂಘವನ್ನು ನೋಂದಾಯಿಸತಕ್ಕದ್ದು ಮತ್ತು ಸಮ್ಮಿಲನವು ಅಂಥ ನೋಂದಣಿಯ ದಿನಾಂಕದಿಂದ ಪರಿಣಾಮಕಾರಿಯಾಗತಕ್ಕದ್ದು.

**26. ಹೆಸರಿನ ಬದಲಾವಣೆ ಮತ್ತು ಸಮ್ಮಿಲನದ ಪರಿಣಾಮಗಳು.–** (1) ನೋಂದಾಯಿತ ವೃತ್ತಿ ಸಂಘದ ಹೆಸರಿನ ಬದಲಾವಣೆಯು ವೃತ್ತಿ ಸಂಘದ ಯಾವುದೇ ಹಕ್ಕುಗಳನ್ನು ಅಥವಾ ಬಾಧ್ಯತೆಗಳನ್ನು ಬಾಧಿಸತಕ್ಕದ್ದಲ್ಲ ಅಥವಾ ವೃತ್ತಿ ಸಂಘವು ಅಥವಾ ಅದರ ವಿರುದ್ಧ ಹೂಡಿರುವ ಯಾವುದೇ ಕಾನೂನು ವ್ಯವಹರಣೆಯನ್ನು ದೋಷಯುಕ್ತವನ್ನಾಗಿ ಮಾಡತಕ್ಕದ್ದಲ್ಲ ಮತ್ತು ಅದರ ಹಿಂದಿನ ಹೆಸರಿನ ಮೂಲಕ ವೃತ್ತಿ ಸಂಘವು ಅಥವಾ ಅದರ ವಿರುದ್ಧ ಮುಂದುವರಿಯಬಹುದಾಗಿದ್ದ ಅಥವಾ ಪ್ರಾರಂಭಿಸಬಹುದಾಗಿದ್ದ ಯಾವುದೇ ಕಾನೂನು ವ್ಯವಹರಣೆಯನ್ನು ಅದರ ಹೊಸ ಹೆಸರಿನಲ್ಲಿ ಅದು ಅಥವಾ ಅದರ ವಿರುದ್ಧ ಮುಂದುವರಿಸಬಹುದು ಅಥವಾ ಪ್ರಾರಂಭಿಸಬಹುದು.

(2) ಎರಡು ಅಥವಾ ಹೆಚ್ಚು ನೋಂದಾಯಿತ ವೃತ್ತಿ ಸಂಘಗಳ ಸಮ್ಮಿಲನವು ಅಂಥ ವೃತ್ತಿ ಸಂಘಗಳ ಪೈಕಿ ಯಾವುದೇ ವೃತ್ತಿ ಸಂಘದ ಯಾವುದೇ ಹಕ್ಕನ್ನು ಅಥವಾ ಆ ವೃತ್ತಿ ಸಂಘಗಳ ಪೈಕಿ ಯಾವುದೇ ಒಂದು ವೃತ್ತಿ ಸಂಘದ ಸಾಲಗಾರನ ಯಾವುದೇ ಹಕ್ಕಿಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**27. ವಿಘಟನೆ.–** (1) ನೋಂದಾಯಿತ ವೃತ್ತಿ ಸಂಘವು, ವಿಘಟಿತವಾದಾಗ ವೃತ್ತಿ ಸಂಘದ ಏಳು ಜನ ಸದಸ್ಯರು ರುಜು ಹಾಕಿರುವ ವಿಘಟನೆಯ ನೋಟೀಸನ್ನು ಹದಿನಾಲ್ಕು ದಿನಗಳೊಳಗಾಗಿ ರಿಜಿಸ್ಟ್ರಾರನಿಗೆ ಕಳುಹಿಸತಕ್ಕದ್ದು ಮತ್ತು ವಿಘಟನೆಯನ್ನು ವೃತ್ತಿ ಸಂಘದ ನಿಯಮಗಳಿಗನುಸಾರವಾಗಿ ಮಾಡಲಾಗಿದೆಯೆಂದು ಅವನಿಗೆ ಮನದಟ್ಟಾದರೆ, ಅವನು ಅದನ್ನು ನೋಂದಾಯಿಸತಕ್ಕದ್ದು ಮತ್ತು ಅಂಥ ನೋಂದಣಿಯ ದಿನಾಂಕದಿಂದ ವಿಘಟನೆಯು ಪರಿಣಾಮವುಳ್ಳದ್ದಾಗಿರತಕ್ಕದ್ದು.

(2) ನೋಂದಾಯಿತ ವೃತ್ತಿ ಸಂಘದ ವಿಘಟನೆಯನ್ನು ನೋಂದಾಯಿಸಿರುವಲ್ಲಿ ಮತ್ತು ವಿಘಟನೆಯ ತರುವಾಯ ವೃತ್ತಿ ಸಂಘದ ನಿಯಮಗಳು ವೃತ್ತಿ ಸಂಘದ ನಿಧಿಗಳ ವಿತರಣೆಯ ಬಗ್ಗೆ ಉಪಬಂಧಿಸದೆ ಇರುವಾಗ ನಿಮಮಿಸಬಹುದಾದಂಥ ರೀತಿಯಲ್ಲಿ ರಿಜಿಸ್ಟ್ರಾರನ ನಿಧಿಗಳನ್ನು ಸದಸ್ಯರಲ್ಲಿ ವಿಭಜಿಸತಕ್ಕದ್ದು.

**28. ವಿವರಪಟ್ಟಿಕೆಗಳು.–** ನಿಯಮಿಸಬಹುದಾದಂಥ ದಿನಾಂಕದಂದು ಅಥವಾ ಅದಕ್ಕೆ ಮುಂಚೆ, ಅಂಥ ನಿಯಮಿಸಿದ ದಿನಾಂಕದ ನಿಕಟಪೂರ್ವದ ಡಿಸೆಂಬರ್ 31ನೇ ದಿನಾಂಕಕ್ಕೆ ಕೊನೆಗೊಳ್ಳುವ ವರ್ಷದಲ್ಲಿ ನಿಯಮಿಸಲಾದ ರೀತಿಯಲ್ಲಿ ಲೆಕ್ಕಪರಿಶೋಧಿಸಿದ ಪ್ರತಿಯೊಂದು ನೋಂದಾಯಿತ ವೃತ್ತಿ ಸಂಘದ ಎಲ್ಲಾ ಜಮಾ ಹಾಗೂ ಖರ್ಚುಗಳ ಮತ್ತು ಅಂಥ ಡಿಸೆಂಬರ್ 31ನೇ ದಿನದಂದು ಅಸ್ತಿತ್ವದಲ್ಲಿದ್ದ ವೃತ್ತಿ ಸಂಘದ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಸಾಮಾನ್ಯ ವಿವರಣೆಯನ್ನು ರಿಜಿಸ್ಟ್ರಾರನಿಗೆ ಪ್ರತಿವರ್ಷ ಕಳುಹಿಸತಕ್ಕದ್ದು. ವಿವರಪತ್ರವನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ತಯಾರಿಸತಕ್ಕದ್ದು ಮತ್ತು ಅದು ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡಿರತಕ್ಕದ್ದು.

(2) ಸಾಮಾನ್ಯ ವಿವರಣೆಯ ಜೊತೆಗೆ ಸಾಮಾನ್ಯ ವಿವರಪತ್ರವು ಯಾವ ವರ್ಷಕ್ಕೆ ಸಂಬಂಧಪಡುತ್ತದೆಯೋ ಆ ವರ್ಷದಲ್ಲಿ ವೃತ್ತಿ ಸಂಘವು ಮಾಡಿದ ಪದಾಧಿಕಾರಿಗಳ ಎಲ್ಲ ಬದಲಾವಣೆಗಳನ್ನು ತೋರಿಸುವ ವಿವರಣೆಯನ್ನು, ಅದನ್ನು ರಿಜಿಸ್ಟ್ರಾರನಿಗೆ ರವಾನಿಸುವ ದಿನಾಂಕದವರೆಗೆ ಸರಿಮಾಡಿದ ವೃತ್ತಿ ಸಂಘದ ನಿಯಮಗಳ ಒಂದು ಪ್ರತಿಯನ್ನೂ ಸಹ ರಿಜಿಸ್ಟ್ರಾರನಿಗೆ ಕಳುಹಿಸತಕ್ಕದ್ದು.

(3) ನೋಂದಾಯಿತ ವೃತ್ತಿ ಸಂಘದ ನಿಯಮಗಳಲ್ಲಿ ಮಾಡಿದ ಪ್ರತಿಯೊಂದು ಬದಲಾವಣೆಯ ಒಂದು ಪ್ರತಿಯನ್ನು ಬದಲಾವಣೆ ಮಾಡಿದ ಹದಿನೈದು ದಿವಸಗಳೊಳಗಾಗಿ ರಿಜಿಸ್ಟ್ರಾರನಿಗೆ ಕಳುಹಿಸತಕ್ಕದ್ದು.

(4) ಉಪಪ್ರಕರಣ (1), (2) ಮತ್ತು (3)ರಲ್ಲಿ ಉಲ್ಲೇಖಿಸಿದ ದಸ್ತಾವೇಜುಗಳನ್ನು ಪರೀಕ್ಷಿಸುವ ಉದ್ದೇಶಕ್ಕಾಗಿ ರಿಜಿಸ್ಟ್ರಾರನು ಅಥವಾ ಅವನಿಂದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅಧಿಕೃತನಾದ ಯಾರೇ ಅಧಿಕಾರಿಯು ಎಲ್ಲ ಯುಕ್ತ ಕಾಲಗಳಲ್ಲಿ ವೃತ್ತಿ ಸಂಘಕ್ಕೆ ಸಂಬಂಧಪಟ್ಟ ನೋಂದಣಿ ಪ್ರಮಾಣಪತ್ರವನ್ನು, ಲೆಕ್ಕದ ಪುಸ್ತಕಗಳನ್ನು, ರಿಜಿಸ್ಟರುಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಅದರ ನೋಂದಾಯಿತ ಕಚೇರಿಯಲ್ಲಿ ಪರೀಕ್ಷಿಸಬಹುದು ಅಥವಾ ಈ ಬಗ್ಗೆ ಅವನು ನಿರ್ದಿಷ್ಟಪಡಿಸಬಹುದಾದಂಥ ಸ್ಥಳದಲ್ಲಿ ಅವುಗಳನ್ನು ಹಾಜರುಪಡಿಸುವಂತೆ ಅಗತ್ಯಪಡಿಸಬಹುದು. ಆದರೆ ಅಂಥ ಯಾವುದೇ ಸ್ಥಳವು ವೃತ್ತಿ ಸಂಘದ ನೋಂದಾಯಿತ ಕಚೇರಿಯಿಂದ ಹತ್ತು ಮೈಲಿಗಳಿಗಿಂತ ಹೆಚ್ಚು ದೂರದಲ್ಲಿರತಕ್ಕದ್ದಲ್ಲ.

## ಅಧ್ಯಾಯ IV

## ವಿನಿಯಮಗಳು

**29. ವಿನಿಯಮಗಳ ರಚನಾಧಿಕಾರ.–** (1) ಸಮುಚಿತ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ವಿನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ವಿನಿಯಮಗಳನ್ನು ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:–

(ಎ) ವೃತ್ತಿ ಸಂಘಗಳನ್ನು ಮತ್ತು ವೃತ್ತಿ ಸಂಘಗಳ ನಿಯಮಗಳನ್ನು ನೋಂದಾಯಿಸತಕ್ಕ ರೀತಿ ಮತ್ತು ನೋಂದಣಿಯ ಬಗ್ಗೆ ಸಂದಾಯ ಮಾಡಬೇಕಾದ ಫೀಜು;

(ಬಿ) ಯಾವುದೇ ನೋಂದಾಯಿತ ವೃತ್ತಿ ಸಂಘವು ತನ್ನ ಪ್ರಧಾನ ಕಚೇರಿಯನ್ನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಬದಲಾಯಿಸಿರುವ ಸಂದರ್ಭದಲ್ಲಿ ಆ ಯಾವುದೇ ವೃತ್ತಿ ಸಂಘದ ನೋಂದಣಿಯ ವರ್ಗಾವಣೆ;

(ಸಿ) ನೋಂದಾಯಿತ ವೃತ್ತಿ ಸಂಘಗಳ ಅಥವಾ ಅಂಥ ಸಂಘಗಳ ಯಾವುದೇ ವರ್ಗದ ಲೆಕ್ಕಪತ್ರಗಳ ಪರಿಶೋಧನೆ ಮಾಡುವ ರೀತಿ ಮತ್ತು ಲೆಕ್ಕಪರಿಶೋಧನೆ ಮಾಡುವವರ ಅರ್ಹತೆಗಳು;

(ಡಿ) ರಿಜಿಸ್ಟ್ರಾರರುಗಳು ಇಟ್ಟಿರುವ ದಸ್ತಾವೇಜುಗಳ ಪರಿಶೀಲನೆಗೆ ಯಾವ ಷರತ್ತಿಗೊಳಪಟ್ಟು ಅವಕಾಶವಿರತಕ್ಕದ್ದೋ ಆ ಯಾವುದೇ ಷರತ್ತುಗಳು ಮತ್ತು ಅಂಥ ಪರಿಶೀಲನೆಗೆ ಸಂಬಂಧಿಸಿದಂತೆ ವಿಧಿಸತಕ್ಕ ಫೀಜು; ಮತ್ತು

(ಇ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ವಿಷಯ.

(3) ಕೇಂದ್ರ ಸರ್ಕಾರವು, ಪ್ರಕರಣ 22ರ ಉಪಪ್ರಕರಣ (1)ರ ಮೇರೆಗೆ ರಚಿಸಿದ ಪ್ರತಿಯೊಂದು ಅಧಿಸೂಚನೆಯನ್ನು ಹಾಗೂ ಉಪಪ್ರಕರಣ (1)ರ ಮೇರೆಗೆ ರಚಿಸಿದ ಪ್ರತಿಯೊಂದು ವಿನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅವು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯೊಳಗೆ ಮಂಡಿಸತಕ್ಕದ್ದು ಮತ್ತು ಈ ಹಿಂದೆ ಹೇಳಲಾದ ಅಧಿವೇಶನದ ಅಥವಾ ಒಂದಾದ ಮೇಲೊಂದು ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ಅಧಿಸೂಚನೆಯಲ್ಲಿ ಅಥವಾ ವಿನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ

ಸದನಗಳು ಒಪ್ಪಿದರೆ ಅಥವಾ ಆ ಅಧಿಸೂಚನೆಯನ್ನು ಅಥವಾ ವಿನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯವೇ ಆ ಅಧಿಸೂಚನೆಯು ಅಥವಾ ವಿನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯೂ ಆ ಅಧಿಸೂಚನೆ ಅಥವಾ ವಿನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(4) ರಾಜ್ಯ ಸರ್ಕಾರವು, ಪ್ರಕರಣ 22ರ ಉಪಪ್ರಕರಣ (1)ರ ಮೇರೆಗೆ ರಚಿಸಿದ ಪ್ರತಿಯೊಂದು ಅಧಿಸೂಚನೆಯನ್ನು ಹಾಗೂ ಉಪಪ್ರಕರಣ (1)ರ ಮೇರೆಗೆ ರಚಿಸಿದ ಪ್ರತಿಯೊಂದು ವಿನಿಯಮವನ್ನು ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಮುಂದೆ ಮಂಡಿಸತಕ್ಕದ್ದು.

**30. ವಿನಿಯಮಗಳ ಪ್ರಕಟಣೆ.–** (1) ಪ್ರಕರಣ 29ರ ಮೇರೆಗೆ ಪ್ರದತ್ತವಾದ ವಿನಿಯಮಗಳನ್ನು ರಚಿಸುವ ಅಧಿಕಾರವು ಆ ವಿನಿಯಮಗಳನ್ನು ಪೂರ್ವ ಪ್ರಕಟಣೆಯ ಅನಂತರ ರಚಿಸುವ ಷರತ್ತಿಗೆ ಒಳಪಟ್ಟಿರತಕ್ಕದ್ದು.

(2) ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ 10)ರ 23ನೇ ಪ್ರಕರಣದ (3)ನೇ ಖಂಡಕ್ಕನುಸಾರವಾಗಿ ನಿರ್ದಿಷ್ಟಪಡಿಸಬೇಕಾಗಿರುವ ಯಾವ ದಿನಾಂಕದ ತರುವಾಯ ರಚಿಸಲು ಪ್ರಸ್ತಾವಿಸಿದ ವಿನಿಯಮಗಳ ಕರಡನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕಾಗಿದೆಯೋ ಆ ಯಾವುದೇ ದಿನಾಂಕವು, ಸಾರ್ವಜನಿಕ ಮಾಹಿತಿಗಾಗಿ ಪ್ರಸ್ತಾವಿತ ವಿನಿಯಮಗಳ ಕರಡನ್ನು ಪ್ರಕಟಿಸಲಾದ ದಿನಾಂಕದಿಂದ ಮೂರು ತಿಂಗಳುಗಳಿಗಿಂತ ಕಡಿಮೆಯಾಗಿರತಕ್ಕದ್ದಲ್ಲ.

(3) ಹಾಗೆ ರಚಿಸಿದ ವಿನಿಯಮಗಳನ್ನು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ಅಂಥ ಪ್ರಕಟಣೆಯ ಅನಂತರ ಈ ಅಧಿನಿಯಮದಲ್ಲಿ ಅಧಿನಿಯಮಿಸಲಾಗಿದ್ದರೆ ಹೇಗೋ ಹಾಗೆ ಅವುಗಳು ಪರಿಣಾಮಕಾರಿಯಾಗಿರತಕ್ಕದ್ದು.

## ಅಧ್ಯಾಯ V

## ದಂಡನೆಗಳು ಮತ್ತು ಪ್ರಕ್ರಿಯೆ

**31. ವಿವರಪಟ್ಟಿಕೆಗಳನ್ನು ಸಲ್ಲಿಸಲು ತಪ್ಪುವುದು.–** (1) ಯಾವುದೇ ನೋಂದಾಯಿತ ವೃತ್ತಿ ಸಂಘದ ಕಡೆಯಿಂದ ಈ ಅಧಿನಿಯಮದ ಯಾವುದೇ ಉಪಬಂಧದ ಮೂಲಕ ಅಥವಾ ಅದರ ಮೇರೆಗೆ ಅಗತ್ಯಪಡಿಸಲಾದಂತೆ ಯಾವುದೇ ನೋಟೀಸನ್ನು ಕೊಡುವುದರಲ್ಲಿ ಅಥವಾ ಯಾವುದೇ ವಿವರಪತ್ರವನ್ನು

ಅಥವಾ ಇತರ ದಸ್ತಾವೇಜನ್ನು ಕಳುಹಿಸುವಲ್ಲಿ ತಪ್ಪಿದರೆ, ಅವುಗಳನ್ನು ಕೊಡಲು ಅಥವಾ ಕಳುಹಿಸಲು ವೃತ್ತಿ ಸಂಘದ ನಿಯಮಗಳ ಮೂಲಕ ಬದ್ಧನಾಗಿರುವ ಪ್ರತಿಯೊಬ್ಬ ಪದಾಧಿಕಾರಿಯು ಅಥವಾ ಇತರ ವ್ಯಕ್ತಿಯು ಅಂಥ ಯಾರೇ ಪದಾಧಿಕಾರಿ ಅಥವಾ ವ್ಯಕ್ತಿಯು ಇಲ್ಲದಿರುವಲ್ಲಿ ವೃತ್ತಿ ಸಂಘದ ಕಾರ್ಯನಿರ್ವಾಹಕದ ಪ್ರತಿಯೊಬ್ಬ ಸದಸ್ಯನು, ಐದು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ತಪ್ಪುವಿಕೆಯು ಮುಂದುವರಿಯುತ್ತಿರುವ ಸಂದರ್ಭದಲ್ಲಿ ತಪ್ಪುವಿಕೆಯು ಮುಂದುವರಿಯುವ ಮೊದಲ ವಾರದ ಅನಂತರದ ಪ್ರತಿಯೊಂದು ವಾರಕ್ಕೆ ಐದು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು:

ಪರಂತು, ಒಟ್ಟು ಜುಲ್ಮಾನೆಯು ಐವತ್ತು ರೂಪಾಯಿಗಳಿಗೆ ಮೀರತಕ್ಕದ್ದಲ್ಲ.

(2) ಪ್ರಕರಣ 28ರ ಮೂಲಕ ಅಗತ್ಯಪಡಿಸಿದ ಸಾಮಾನ್ಯ ವಿವರಪತ್ರದಲ್ಲಿ ಅಥವಾ ಆ ಪ್ರಕರಣದ ಮೇರೆಗೆ ರಿಜಿಸ್ಟ್ರಾರನಿಗೆ ಕಳುಹಿಸಿದ ನಿಯಮಗಳ ಅಥವಾ ನಿಯಮಗಳ ಬದಲಾವಣೆಯ ಯಾವುದೇ ಪ್ರತಿಯಲ್ಲಿ ಯಾವುದೇ ತಪ್ಪು ನಮೂದನೆಯನ್ನು ಮಾಡುವ ಅಥವಾ ಮಾಡಿಸುವ ಅಥವಾ ಅದರಲ್ಲಿ ಯಾವುದೇ ಲೋಪ ಮಾಡುವ ಅಥವಾ ಮಾಡಿಸುವ ಯಾರೇ ವ್ಯಕ್ತಿಯು ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**32. ವೃತ್ತಿ ಸಂಘಗಳಿಗೆ ಸಂಬಂಧಿಸಿದಂತೆ ಸುಳ್ಳು ಮಾಹಿತಿಯನ್ನು ಒದಗಿಸುವುದು.–** ಯಾರೇ ವ್ಯಕ್ತಿಯು, ವಂಚಿಸುವ ಉದ್ದೇಶದಿಂದ ನೋಂದಾಯಿತ ವೃತ್ತಿ ಸಂಘದ ಯಾರೇ ಸದಸ್ಯನಿಗೆ ಅಥವಾ ಅಂಥ ವೃತ್ತಿ ಸಂಘದ ಸದಸ್ಯನಾಗಲು ಉದ್ದೇಶಿಸುವ ಅಥವಾ ಅರ್ಜಿ ಸಲ್ಲಿಸಿರುವ ಯಾರೇ ವ್ಯಕ್ತಿಗೆ ವೃತ್ತಿ ಸಂಘದ ನಿಯಮಗಳ ಅಥವಾ ಆ ನಿಯಮಗಳಿಗೆ ಮಾಡಿದ ಬದಲಾವಣೆಯ ಪ್ರತಿಯೆಂದು ತಾತ್ಪರ್ಯವಾಗುವ ಯಾವುದೇ ದಸ್ತಾವೇಜನ್ನು ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವಂಥ ನಿಯಮಗಳ ಅಥವಾ ಬದಲಾವಣೆಗಳ ಸರಿಯಾದ ಪ್ರತಿಯಲ್ಲವೆಂದು ಅವುಗಳ ಬಗ್ಗೆ ತಾನು ತಿಳಿದಿದ್ದು ಅಥವಾ ನಂಬಲು ಕಾರಣವಿದ್ದು ಕೊಟ್ಟರೆ ಅಥವಾ ಅಂಥದೇ ಉದ್ದೇಶದಿಂದ ಯಾರೇ ವ್ಯಕ್ತಿಯು ಒಂದು ನೋಂದಾಯಿಸಿರದ ವೃತ್ತಿ ಸಂಘದ ಯಾವುದೇ ನಿಯಮಗಳ ಪ್ರತಿಯನ್ನು ಅಂಥ ನಿಯಮಗಳು ನೋಂದಾಯಿತ ವೃತ್ತಿಸಂಘದ ನಿಯಮಗಳೆಂಬ ಸೋಗಿನ ಮೇಲೆ ನೀಡಿದರೆ, ಅವನು ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**33. ಅಪರಾಧಗಳ ಸಂಜ್ಞೇಯತೆ.–** (1) ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಅಥವಾ ಮೊದಲ ದರ್ಜೆಯ ಮಾಜಿಸ್ಟ್ರೇಟನಿಗೆ ಕೆಳದರ್ಜೆಯ ಯಾವ ನ್ಯಾಯಾಲಯವೂ ಈ ಅಧಿನಿಯಮದ ಮೇರೆಗೆ ಯಾವುದೇ ಅಪರಾಧದ ಅಧಿವಿಚಾರಣೆಯನ್ನು ಮಾಡತಕ್ಕದ್ದಲ್ಲ.

(2) ಯಾವ ನ್ಯಾಯಾಲಯವೂ ರಿಜಿಸ್ಟ್ರಾರನು ಅಥವಾ ಅವನ ಪೂರ್ವ ಮಂಜೂರಾತಿಯೊಂದಿಗೆ ಅಥವಾ 32ನೇ ಪ್ರಕರಣದ ಮೇರೆಗಿನ ಅಪರಾಧದ ಸಂದರ್ಭದಲ್ಲಿ ಪ್ರತಿಯನ್ನು ಯಾರಿಗೆ ಕೊಡಲಾಗಿದೆಯೋ ಆ ವ್ಯಕ್ತಿಯು, ಅಪರಾಧವನ್ನು ಮಾಡಲಾಗಿದೆ ಎಂದು ಆರೋಪಿಸಿದ ದಿನಾಂಕದಿಂದ ಆರು ತಿಂಗಳುಗಳೊಳಗಾಗಿ ಆ ಬಗ್ಗೆ ಫಿರ್ಯಾದು ಮಾಡಿರುವ ಹೊರತು, ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ.